ಐ.ಸಿ.ಎ.ಆರ್. – ಕೆ. ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

ರೈತರಿಗಾಗಿ ಹಾಗೂ ಕೃಷಿ ವಿಸ್ತರಣೆ ಸಿಬ್ಬಂದಿಗಾಗಿ

ಕೃಷಿ ವಿಜ್ಞಾನ ಪತ್ರಿಕೆ

ಸಂಪುಟ–14 | ಜುಲೈ–ಸಪ್ಟೆಂಬರ್, 2025 | ತ್ರೈಮಾಸಿಕ ಪತ್ರಿಕೆ | ಸಂಚಿಕೆ–3

ಸಂಪಾದಕರ ನುಡಿ

ಗದಗ ಜಿಲ್ಲೆಯಾದ್ಯಂತ ಈ ವರ್ಷ ಮೇ ಕೊನೆಯ ವಾರ ಹಾಗೂ ಜೂನ್ ತಿಂಗಳಲ್ಲಿ ಉತ್ತಮ ಮಳೆ ಆಗಿದೆ. ಹೆಚ್ಚಿನ ಕ್ಷೇತ್ರದಲ್ಲಿ ಹೆಸರು ಬೆಳೆಯನ್ನು ಬೆಳೆಯಲಾಗಿದೆ. ತೊಗರಿ ಮತ್ತು ಗೋವಿನ ಜೋಳ ಬಿತ್ತನೆ ಆಗಿ ಉತ್ತಮ ಹಂತದಲ್ಲಿದೆ. ಈರುಳ್ಳಿ ಮತ್ತು ಮೆಣಸಿನಕಾಯಿಯನ್ನು ಬಿತ್ತಲು ಜುಲೈ ತಿಂಗಳು ಸೂಕ್ತ. ಈಗಾಗಲೇ ಬಿತ್ತಿದ ಬೆಳೆಗಳಲ್ಲಿ ಮಣ್ಣಿನ ತೇವಾಂಶ ಕಾಪಾಡಲು ಮತ್ತು ಕಳೆ ಹತೋಟಿಗಾಗಿ ಸೈಕಲ್ ವ್ಹೀಡರ್ ಬಳಸಿರಿ. ಪೌಷ್ಠಿಕ ಭದ್ರತೆಗಾಗಿ ಪೌಷ್ಟಿಕ ಆಹಾರ, ಪೌಷ್ಟಿಕ ತೋಟ ಹಾಗೂ ಉತ್ತಮ ಆರೋಗ್ಯಕ್ಕಾಗಿ ದಿನನಿತ್ಯ ಆಹಾರದಲ್ಲಿ ಸಿರಿಧಾನ್ಯಗಳ ಬಳಕೆ ಕುರಿತ ಮಾಹಿತಿಯನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ. ಈ ಸಂಚಿಕೆಯಲ್ಲಿ ಪ್ರಕಟವಾದ ಮಾಹಿತಿಗಳು ತಮಗೆ ಉಪಯುಕ್ತವಾಗುತ್ತವೆ ಎಂದು ಆಶಿಸುತ್ತೇವೆ.

ಹೆಸರು ಬೆಳೆಯ ಪ್ರಮುಖ ಕೀಟಗಳು ಹಾಗೂ ಅವುಗಳ ನಿಯಂತ್ರಣ

1. **ರಸಹೀರುವ ಕೀಟಗಳು (ಹೇನು ಹಾಗೂ ಥ್ರಿಪ್ಸ)**: ಈ ಕೀಟಗಳು ಚಿಗುರೆಲೆ ಮತ್ತು ಕಾಯಿಗಳಿಂದ ರಸ ಹೀರುತ್ತದೆ. ಇದರಿಂದ ಕಾಯಿಗಳು ಜೊಳ್ಳಾಗಿ ಬೆಳೆಯ ಇಳುವರಿ ಕಡಿಮೆಯಾಗುವದು. ಇವುಗಳನ್ನು ನಿಯಂತ್ರಿಸಲು ಡೈಮಿಥೋಯೇಟ 1.7 ಮಿ.ಲೀ ಅಥವಾ 0.3 ಮಿ.ಲೀ ಇಮಿಡಾಕ್ಲೊಪ್ರಿಡ್ ಔಷಧಿಗಳನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.

2. **ಕಾಯಿ ಕೊರೆಯುವಕೀಟ**: ಈ ಹುಳುವು ಕಾಯಿಯ ಒಳಗೆ ಮೊಟ್ಟೆಯನ್ನಿಡುತ್ತದೆ. ಈ ಮೊಟ್ಟೆಗಳು ಮರಿಯಾದ ನಂತರ ಬೀಜವನ್ನುತಿಂದು ಹಾಳು ಮಾಡುತ್ತವೆ. ಈ ಕೀಟಗಳನ್ನು ಹತೋಟಿ ಮಾಡಲು ಲ್ಯಾಮಡಾ ಸಿಲೋಥ್ರಿನ್ 1 ಮಿ.ಲೀ ಅಥವಾ ಪ್ರೊಫೇನೊಪಾಸ್ 2 ಮಿ.ಲೀ. ಔಷಧಿಯನ್ನು ಪ್ರತಿ ಲೀಟರ ನೀರಿಗೆ ಬೆರಸಿ ಸಿಂಪರಣೆ ಮಾಡಿರಿ.

3. **ಅಗ್ರೋಮೈಜಿಡ್ ನೊಣ**: ಈ ನೊಣವು ಹೆಸರು ಗಿಡಗಳ ಕಾಂಡ ಮತ್ತು ಕಾಯಿಗಳ ಎಳೆಯದಾದ ಭಾಗಗಳಲ್ಲಿ ಮೊಟ್ಟೆಯಿಡುತ್ತದೆ. ಮೊಟ್ಟೆಗಳು ಮರಿಯಾದ ನಂತರ ಕಾಂಡ ಕೊರೆಯುತ್ತವೆ. ಕೊರೆದ ಕಾಂಡ ಬಾಡುತ್ತದೆ. ಈ ಕೀಟದಿಂದ ಎಳೆಯ ಸಸಿಗಳು ಹೆಚ್ಚು ನಷ್ಟವಾಗುವವು. ಇವುಗಳನ್ನು ನಿಯಂತ್ರಿಸಲು ಮೇ ಕೊನೆಯ ವಾರ ಅಥವಾ ಜೂನ್ ಎರಡನೆಯ ವಾರದೊಳಗೆ ಬಿತ್ತನೆ ಮಾಡಬೇಕು. ಬಾಡುತ್ತಿರುವ ಸಸಿಗಳನ್ನು ಕಿತ್ತು ನೆಲದಲ್ಲಿ ಹೂಳಬೇಕು. ಇಮಿಡಾಕ್ಲೊಪ್ರಿಡ್ 0.3 ಮಿ.ಲೀ ಅಥವಾ ಥೈಯೊಮಿಥಾಕ್ಸಾಮ್ 0.3 ಗ್ರಾಂ ಅಥವಾ ಕಾರ್ಬಾಸಲ್ಫಾನ್ 2 ಮಿ.ಲೀ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

4. **ಎಲೆ ತಿನ್ನುವ ಹುಳು ಮತ್ತು ಕೊಂಬಿನ ಹುಳು**: ಈ ಹುಳುಗಳು ಎಲೆಗಳನ್ನು ತಿಂದು ಬೆಳೆ ಹಾನಿ ಮಾಡುತ್ತವೆ. ಕೀಟ ಬಾಧೆ ಅತಿಯಾದಾಗ ಎಲ್ಲಾ ಎಲೆಗಳನ್ನು ತಿಂದು ಬೆಳೆಯನ್ನು ಸಂಪೂರ್ಣವಾಗಿ ನಾಶಮಾಡುತ್ತದೆ. ಇವುಗಳನ್ನು ನಿಯಂತ್ರಿಸಲು ದೊಡ್ಡದಾದ ಕೀಟಗಳನ್ನು ಆರಿಸಿ ನಾಶಪಡಿಸಬೇಕು ಹಾಗೂ ಕೀಟಗಳು ಕಂಡತಕ್ಷಣ ಎಸಿಫೇಟ್ 1 ಗ್ರಾಂಅಥವಾ ಪ್ರೊಫೇನೊಫಾಸ್ 2 ಮಿ.ಲೀ. ಅಥವಾ ಇಮಾಮೆಕ್ಟಿನ್ ಬೆಂಜೊಯೇಟ 0.3 ಗ್ರಾಂ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ. ನೀರಿನ ಅನುಕೂಲತೆ ಇಲ್ಲದ ಕಡೆಗೆ 7 ರಿಂದ 8 ಕಿಲೋ ಫೆನವಲರೇಟ ಪುಡಿಯನ್ನು ಪ್ರತಿಎಕರೆಗೆ ಧೂಳೀಕರಿಸಬೇಕು.

ರೋಗಗಳು ಹಾಗೂ ಅವುಗಳ ನಿಯಂತ್ರಣ:

1. **ನಂಜುರೋಗ**: ಎಲೆಗಳ ಮೇಲೆ ತಿಳ ಹಳದಿ ಬಣ್ಣದ ಕಲೆಗಳು ಕಾಣಿಸುತ್ತವೆ. ಇದರಿಂದ ಬೆಳೆ ಸಣ್ಣದಾಗುತ್ತದೆ. ಈ ರೋಗ ತೀವ್ರವಾಗಿದ್ದರೆ ಕಾಯಿ ಬಿಡುವದಿಲ್ಲ. ಕಾಯಿ ಬಿಟ್ಟರೆ ಕಾಳುಗಳು ಸಣ್ಣದಾಗಿ, ಇಳುವರಿ ಕಡಿಮೆಯಾಗುವದು. ಆದ್ದರಿಂದ ರೋಗಕ್ಕೆ ತುತ್ತಾದ ಗಿಡಗಳನ್ನು ಪ್ರಾರಂಭದ ಹಂತದಲ್ಲಿ ಗುರುತಿಸಿ ಕಿತ್ತು ಮಣ್ಣಿನಲ್ಲಿ ಹೂಳಿರಿ. ನಂತರ ಡೈಮಿಥೊಯೇಟ 1.7 ಮಿ.ಲೀ. ಅಥವಾ ಇಮಿಡಾಕ್ಲೊಪ್ರಿಡ್ 0.3 ಮಿ.ಲೀ. ಔಷಧಿಯನ್ನು ಪ್ರತಿ ಲೀಟರ್‌ಗೆ ಕೂಡಿಸಿ ಸಿಂಪರಣೆ ಮಾಡಿರಸ ಹೀರುವ ಕೀಟಗಳನ್ನು ಹತೋಟಿ ಮಾಡಿ ರೋಗ ಉಲ್ಬಣಿಸುವುದನ್ನು ತಡೆಯಿರಿ.

2. **ಬೂದಿ ರೋಗ**: ಎಲೆಯ ಮೇಲೆ ಶಿಲೀಂದ್ರದ ಬಿಳಿಯ ಪುಡಿಯಂಥ ಬೆಳವಣಿಗೆಯನ್ನು ಕಾಣಬಹುದು. ಇದರಿಂದ ಗಿಡಗಳು ಪೂರ್ತಿಯಾಗಿ ಒಣಗುತ್ತವೆ. ಇದರಿಂದ ಶೇ.10-60 ರಷ್ಟು ಇಳುವರಿ ನಷ್ಟವಾಗಬಹುದು. ಈ ರೋಗ ನಿಯಂತ್ರಿಸಲು ಪ್ರೊಪಿಕೋನೊಜೋಲ್ 1 ಮಿ.ಲಿ ಅಥವಾ ಕಾರ್ಬಂಡೈಜಿಮ್ 1 ಗ್ರಾಂ ಅಥವಾ ನೀರಿನಲ್ಲಿ ಕರಗುವ ಗಂಧಕ 3 ಗ್ರಾಂ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.

3. **ಎಲೆ ಚುಕ್ಕೆರೋಗ**: ಎಲೆಗಳ ಮೇಲೆ ವೃತ್ತಾಕಾರದ ಕಂದು ಅಥವಾ ಕಪ್ಪು ಬಣ್ಣದ ಚುಕ್ಕೆಗಳನ್ನು ಕಾಣಬಹುದು. ಈ ರೋಗ ನಿಯಂತ್ರಿಸಲು ಮೆಂಕೋಜೆಬ್ 2 ಗ್ರಾಂ ಅಥವಾ ಕಾಪರಆಕ್ಸಿಕ್ಲೋರೈಡ್ ಅಥವಾ ಹೆಕ್ಸಾಕೋನಾಜೋಲ್ 1.5 ಮಿ.ಲೀ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪಡಿಸಿರಿ. ಬಿತ್ತುವ ಪೂರ್ವದಲ್ಲಿ ಪ್ರತಿ ಕಿಲೋ ಬೀಜಕ್ಕೆ ಟ್ರೈಕೊಡರ್ಮಾ 10 ಗ್ರಾಂ ಜೈವಿಕ ಶಿಲೀಂದ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತಿರಿ.

ಶೇಂಗಾ ಬೆಳೆಯಲ್ಲಿ ಬರುವ ಪ್ರಮುಖ ಕೀಟ-ರೋಗಗಳು ಹಾಗೂ ಅವುಗಳ ನಿಯಂತ್ರಣ

ಎಲೆ ತಿನ್ನುವ ಹುಳು : ಈ ಕೀಟವು ಶೇಂಗಾ ಬೆಳೆ ಬಿತ್ತಿದ 20 ದಿನಗಳ ನಂತರ ಕಾಣಿಸಿಕೊಂಡು 75 ದಿನಗಳವರೆಗೂ ಬಾಧೆ ಮಾಡುತ್ತದೆ. ಕೀಟವು ಎಲೆಗಳನ್ನು ಎಲೆಯ ಅಂಚಿನಿಂದ ಅಥವಾ ಎಲೆಗಳಲ್ಲಿ ರಂಧ್ರ ಮಾಡಿ ತಿನ್ನುತ್ತದೆ. ಈ ಕೀಟದ ಬಾಧೆ ಬಹಳ ತೀವ್ರವಾಗಿದ್ದರೆ ಬೆಳೆಯ ಹಾನಿ ಪ್ರಮಾಣ ಜಾಸ್ತಿಯಾಗಿ ಶೇಂಗಾ ಬೆಳೆ ಇಳುವರಿ ಕುಂಠಿತವಾಗುತ್ತದೆ.

ಹತೋಟಿ ಕ್ರಮಗಳು: ಮೊದಲನೇಯ ಹಂತದ ಎಲೆ ತಿನ್ನುವ ಮರಿಹುಳುಗಳು ಕಂಡ ತಕ್ಷಣ ಇಂಡಾಕ್ಸಿಕಾರ್ಬ 0.3 ಮಿ.ಲೀ ಅಥವಾ ಇಮಾಮೆಕ್ಟಿನ್ ಬೆಂಜೊಯೇಟ್ 0.3 ಗ್ರಾಂ ಕೀಟನಾಶಕ ಔಷಧಿಯನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.

ಸುರಳಿ ಪೂಚಿ : ಈ ಕೀಟವು ಶೇಂಗಾ ಬಿತ್ತಿದ 25 ದಿನಗಳ ನಂತರ ಕಾಣಿಸಿಕೊಳ್ಳುತ್ತದೆ. ಕೀಟಗಳ ಹೆಣ್ಣು ಪತಂಗಗಳು ತತ್ತಿಗಳನ್ನು ಒಂದೊಂದಾಗಿ ಚಿಗುರು ಎಲೆಗಳ ಮಧ್ಯಭಾಗದಲ್ಲಿ ಇಡುತ್ತವೆ. ತತ್ತಿ ಇಟ್ಟು 3 ರಿಂದ 4 ದಿನಗಳಾದ ಮೇಲೆ ತತ್ತಿಯಿಂದ ಮರಿ ಹುಳು ಹೊರಬಂದು ಎರಡು ಎಲೆಗಳನ್ನು ಕೂಡಿಸಿ ಕೆರೆದು ತಿಂದು ಬೆಳೆಯನ್ನು ಒಣಗುವಂತೆ ಮಾಡುತ್ತವೆ. ಇದರಿಂದ ಶೇಕಡಾ 20 ರಿಂದ 40 ರಷ್ಟು ಬೆಳೆ ನಷ್ಟವಾಗುತ್ತದೆ.

ಹತೋಟಿ ಕ್ರಮಗಳು : ಬೆಳೆ 20 ರಿಂದ 25 ದಿನಗಳಿದ್ದಾಗ 2 ಮಿ.ಲೀ ಪ್ರೊಫೆನೊಪಾಸ್ ಮತ್ತು 2 ಮಿ.ಲೀ ನಿಂಬಿಸಿಡಿನ್ ಔಷಧಿಯನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು. ಬೆಳೆ 40 ರಿಂದ 45 ದಿನಗಳಿದ್ದಾಗ 2 ಮಿ.ಲೀ ಕಾರ್ಬೊಸಲ್ಫಾನ್ ಮತ್ತು 0.5 ಮಿ.ಲೀ ಡಿ.ಡಿ.ವ್ಹಿ.ಪಿ ಔಷಧಿ ಮತ್ತು 4 ಗ್ರಾಂ 19:19:19 ಎನ್.ಪಿ.ಕೆ ಗೊಬ್ಬರವನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

ಕತ್ತುಕೊಳೆ ರೋಗ (ಬುಳುಸು ರೋಗ) : ಈ ರೋಗ ಮಣ್ಣಿನಲ್ಲಿ, ಬೀಜದಲ್ಲಿ ಮತ್ತು ವಾತಾವರಣದಲ್ಲಿ ಹರಡಿರುವ ಶಿಲೀಂದ್ರದಿಂದ ಬರುತ್ತದೆ. ಮೊಳಕೆಯಿಂದ ಪ್ರಾರಂಭವಾಗಿ ಬೆಳೆ ಮಾಗುವವರೆಗೆ ಈ ರೋಗದಿಂದ ಸಸಿಗಳು ಸಾಯುತ್ತವೆ. ಕಾಯಿಗಳು ನೆಲದಲ್ಲಿ ಉಳಿಯುತ್ತವೆ. ಕಾಯಿಗಳಲ್ಲಿ ಕಾಳುಗಳ ಬಣ್ಣ ಕಪ್ಪು ಮಿಶ್ರಿತ ಕಂದು ಬಣ್ಣದಿಂದ ಕೂಡಿರುತ್ತದೆ. ಇದರಿಂದ ಬೆಳೆಯ ಇಳುವರಿ 10 ರಿಂದ 50 ರಷ್ಟು ನಷ್ಟವಾಗುತ್ತದೆ.

ಹತೋಟಿ ಕ್ರಮಗಳು : ಬಿತ್ತುವ ಪೂರ್ವದಲ್ಲಿ 1 ಕಿಲೋ ಟ್ರೈಕೋಡರ್ಮಾ, 50 ಕಿಲೋ ಬೇವಿನ ಹಿಂಡಿ ಹಾಗೂ 100 ಕಿಲೋ ಸಗಣಿ ಗೊಬ್ಬರ ಕೂಡಿಸಿ ನಾಲ್ಕು ದಿನ ಕಳಸಿ ನಂತರ ಶೇಂಗಾ ಬಿತ್ತುವ ಹೊಲಕ್ಕೆ ಹಾಕಿ ಬಿತ್ತಬೇಕು. ಒಂದು ಕಿಲೋ ಶೇಂಗಾ ಬೀಜಕ್ಕೆ 10 ಗ್ರಾಂ ಟ್ರೈಕೋಡರ್ಮಾ ಅಥವಾ 3 ಗ್ರಾಂ ಕಾರ್ಬಾಕ್ಸಿನ್ ಔಷಧಿ ಲೇಪನಮಾಡಿ ಬಿತ್ತಬೇಕು ಹಾಗೂ ಕಾಲಗ್ಯೆ ಪದ್ಧತಿ ಅನುಸರಿಸಬೇಕು.

ಎಲೆ ಚುಕ್ಕೆ ರೋಗ : ಬೆಳೆ ಬಿತ್ತಿದ 75 ದಿನಗಳ ನಂತರ ಶೇಕಡಾ 10-15 ರಷ್ಟು ರೋಗ ಕಾಣಿಸಿಕೊಂಡರೆ ಯಾವುದೇ ಸಿಂಪರಣೆ ಮಾಡುವದು ಅವಶ್ಯಕತೆ ಇರುವದಿಲ್ಲ. ಬೆಳೆ ಬಿತ್ತಿದ 70 ದಿನದ ಒಳಗಡೆ ರೋಗ ಬಂದರೆ ತಪ್ಪದೇ 1.5 ಮಿ.ಲೀ ಹೆಕ್ಸಾಕೊನಾಜೋಲ್ ಅಥವಾ 1 ಮಿ.ಲೀ ಪ್ರೊಪಿಕೊನಾಜೋಲ್ ಔಷಧಿಗಳನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

ಸೂರ್ಯಕಾಂತಿ ಬೆಳೆ

- ಹಸಿ ಕೊರತೆ ತಡೆಯಲು ಮತ್ತು ರಸಹೀರುವ ಕೀಟ ನಿಯಂತ್ರಿಸಲು, ಬಿತ್ತುವ ಪೂರ್ವದಲ್ಲಿ ಬೀಜಗಳನ್ನು ಕ್ಯಾಲ್ಸಿಯಂ ಕ್ಲೋರೈಡ್ ಶೇಕಡಾ 2ರ ದ್ರಾವಣದಲ್ಲಿ 4-5 ಗಂಟೆಗಳ ಕಾಲ ನೆನೆಸಿ ನೆರಳಿನಲ್ಲಿ ಒಣಗಿಸಿ, ನಂತರ ಪ್ರತಿ ಕಿಲೋ ಬೀಜಕ್ಕೆ 10 ಗ್ರಾಂ ಇಮಿಡಾಕ್ಲೊಪ್ರಿಡ್ ಔಷಧಿಯನ್ನು ಲೇಪನ ಮಾಡಿ ಬಿತ್ತಬೇಕು.
- ಎಲೆ ತಿನ್ನುವ ಪತಂಗಗಳು ಎಲೆಗಳ ತಳಭಾಗದಲ್ಲಿ ಗುಂಪಾಗಿ ತತ್ತಿಗಳನ್ನು ಇಟ್ಟಿರುತ್ತವೆ. ಇಂತಹ ಎಲೆಗಳನ್ನು ಗುರುತಿಸಿ ಕಿತ್ತು ನಾಶಮಾಡಬೇಕು.
- ತೆನೆ ತಿನ್ನುವ ಹುಳು ಮತ್ತು ಬೂದುರೋಗ ಹತೋಟಿ ಮಾಡಲು ಮೊಗ್ಗು ಬಿಡುವ ಹಂತದಲ್ಲಿ 2 ಮಿ.ಲೀ ಪ್ರೋಪೆನೊಫಾಸ್, 1 ಮಿ.ಲೀ. ಪ್ರೊಪಿಕೊನಾಜೋಲ್ ಮತ್ತು ಕಾಳು ಬೆಳವಣಿಗೆಗಾಗಿ 2 ಗ್ರಾಂ ಬೋರಾನ್ ಮತ್ತು 4 ಗ್ರಾಂ 19:19:19 ಎನ್.ಪಿ.ಕೆ ಗೊಬ್ಬರವನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
- ನಂಜು ರೋಗ ತಡೆಯಲು ಬಿತ್ತುವ ಪೂರ್ವದಲ್ಲಿ 1 ಕಿಲೋ ಬೀಜಕ್ಕೆ 10 ಗ್ರಾಂ ಇಮಿಡಾಕ್ಲೊಪ್ರಿಡ್ (ಗೌಚ್) ಔಷಧಿಯನ್ನು ಬೀಜಕ್ಕೆ ಲೇಪಿಸಿ ಬಿತ್ತಬೇಕು.
- ನಂಜು ರೋಗಕ್ಕೆ ತುತ್ತಾದ ಗಿಡಗಳನ್ನು ಕಿತ್ತು ಮಣ್ಣಿನಲ್ಲಿ ಸೇರಿಸಿ ನಂತರ ಬೆಳೆಗೆ 0.3 ಮಿ.ಲೀ ಇಮಿಡಾಕ್ಲೊಪ್ರಿಡ್ ಅಥವಾ 2 ಮಿ.ಲೀ ಪ್ರೊಫೆನೊಪಾಸ್ ಔಷಧಿ ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

ಗೋವಿನ ಜೋಳದಲ್ಲಿ ಸೈನಿಕ ಹುಲುವಿನ ನಿರ್ವಹಣೆ

ಗದಗ ಜಿಲ್ಲೆಯ ಕೆಳವು ಭಾಗಗಳಲ್ಲಿ ಹೆಚ್ಚಿನ ಗೋವಿನ ಜೋಳದ ಬಿತ್ತನೆಯಾಗಿದೆ. 15 ರಿಂದ 30 ದಿನಗಳ ಬೆಳೆಗೆ ಸೈನಿಕ ಹುಲುವಿನ ಬಾಧೆ ಕಂಡು ಬರುತ್ತದೆ ಹಾಗೂ ಇದರ ಹಾನಿ ಮಧ್ಯಮ ಹಂತದಲ್ಲಿ ಹಾಗೂ ಕೊನೆ ಹಂತದಲ್ಲು ಗಣನೀಯವಾಗಿರುತ್ತದೆ. ಆದ್ದರಿಂದ, ಅದರ ನಿರ್ವಹಣೆ ಉತ್ತಮ ಇಳುವರಿ ಪಡೆಯಲು ಪ್ರಮುಖ ವಾಗಿದೆ.

ಈ ಸೈನಿಕ ಹುಳು ವೈಜ್ಞಾನಿಕವಾಗಿ ಸ್ಪೋಡೋಪ್ಟೆರಾ ಫ್ರೋಜಿಪೆರ್ಡಾ ಹಾಗೂ ಸಾಮಾನ್ಯವಾಗಿ ಫಾಲ್ ಆರ್ಮಿ ವಾರ್ಮ ಸ್ಥಳಿಯವಾಗಿ ಲದ್ದಿ ಹುಳು ಎಂದು ಕರೆಯುತ್ತಾರೆ.

ಹಾನಿಯ ಲಕ್ಷಣಗಳು :

ಹೆಣ್ಣು ಪತಂಗಗಳು ಎಲೆಗಳ ಮೇಲೆ ಅಥವಾ ಕೆಳಗೆ ಅಥವಾ ಸುಳಿಯಲ್ಲಿ ಗುಂಪುಗಳಾಗಿ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಯಿಂದ ಬಂದ ಮರಿಗಳು ಗುಂಪಿನಲ್ಲಿದ್ದು ಎಲೆಯ ಹಸಿರು ಭಾಗವನ್ನು ಕರೆದು ತಿನ್ನುತ್ತವೆ. ತದನಂತರ ಗೋವಿನ ಜೋಳದ ಸುಳಿಯಲ್ಲಿ ಉಳಿದುಕೊಂಡು ಸಸ್ಯಗಳ ಹರಿತ್ತನ್ನು ಕೆರೆದು ತಿಂದು ಬದುಕುತ್ತವೆ. ಇಂತಹ ಎಲೆಗಳು ಜಾಳು

ಜಾಳಾಗಿದ್ದು ಅಸ್ಥಿಪಂಜರದಂತೆ ಗೋಚರಿಸಿ, ಎಲೆಗಳಲ್ಲಿ ದೊಡ್ಡ ದೊಡ್ಡ ಹಾಗೂ ಸಾಲಿನಲ್ಲಿರುವ ಕಿಡಕಿಗಳನ್ನು ಅಥವಾ ರಂಧ್ರಗಳನ್ನು ಕೊರೆಯುತ್ತದೆ.

ಗೋವಿನ ಜೋಳದ ಬೆಳೆಯಲ್ಲಿ ಸಮಾನಾಂತರವಾಗಿ ಈ ರೀತಿಯ ರಂಧ್ರಗಳನ್ನು ಗಮನಿಸಿದರೆ ಆಕ್ರಮಣಕಾರಿ ಕೀಟವು ಒಳಗಡೆ ಇದೆ ಎಂದು ಭಾವಿಸಬೇಕು. ಕೀಟದ ಬಾಧೆಯು ತೀವ್ರವಾದಲ್ಲಿ ಬೆಳೆಯುತ್ತಿರುವ ಸುಳಿಯನ್ನೇ ತಿಂದು ಹಾಕಿ ಬೆಳೆಗೆ ತೀವ್ರ ಹಾನಿ ಉಂಟು ಮಾಡಬಲ್ಲದು ಅಥವಾ ಸಸ್ಯವು ಸತ್ತು ಹೋಗುವುದು. ಕೀಡೆಗಳು ಬೆಳೆದಂತೆ ಹಾನಿಯ ಮಟ್ಟ ತೀವ್ರವಾಗುತ್ತದೆ.

ಬೆಳೆದ ಕೀಡೆಗಳು ಒಂದನ್ನೊಂದು ತಿಂದು ಕೀಟಭಕ್ಷಕ ಪ್ರವೃತ್ತಿಯನ್ನು ತೋರುತ್ತವೆ. ಕೀಡೆಗಳು 6 ಹಂತಗಳನ್ನು ಸುಮಾರು 2 ರಿಂದ 3 ವಾರಗಳಲ್ಲಿ ಅಂದರೆ 14 ರಿಂದ 21 ದಿನಗಳಲ್ಲಿ ಪೂರೈಸಬಲ್ಲವು. ನಿರಂತರವಾಗಿ ಆಹಾರ ಭಕ್ಷಿಸುವ ಬೆಳೆದ ಕೀಡೆಗಳು ತಾವು ತಿನ್ನುವ ಆಹಾರವು ಖಾಲಿಯಾದ ತಕ್ಷಣ ಆಹಾರ ಅನ್ವೇಷಣೆಯಲ್ಲಿ ಒಂದು ಹೊಲದಿಂದ ಅಥವಾ ಗದ್ದೆಯಿಂದ ಮತ್ತೊಂದು ಗದ್ದೆಗೆ ಸೈನಿಕೋಪಾದಿಯಲ್ಲಿ ಪಸರಿಸುವ ಶಕ್ತಿಯನ್ನು ಹೊಂದಿವೆ.

ಆರ್ಥಿಕ ನಷ್ಟದ ಮಟ್ಟ :

- ಆರಂಭಿಕ ಹಂತದಲ್ಲಿ ಗೋವಿನ ಜೋಳದಲ್ಲಿ ಶೇ. 20 ರಷ್ಟು ಸುಳಿಯ ಹಾನಿ
- ಮಧ್ಯಮ ಹಂತದಲ್ಲಿ ಗೋವಿನ ಜೋಳದಲ್ಲಿ ಶೇ. 40 ರಷ್ಟು ಸುಳಿಯ ಹಾನಿ
- ತುರಾಯಿ ಹಂತದಲ್ಲಿ ಶೇ. 20 ರಷ್ಟು ಹಾನಿ

<u>ಸಮಗ್ರ ನಿರ್ವಹಣೆ</u> :

- **ಬೇಸಾಯ ಕ್ರಮಗಳು** : ಗೋವಿನಜೋಳವನ್ನು ಏಕಕಾಲಕ್ಕೆ ಬಿತ್ತನೆ ಕೈಗೊಳ್ಳಬೇಕು. ಬೆಳೆ ಕಟಾವು ಆದ ನಂತರ ಮಾಗಿ ಉಳುಮೆ ಮಾಡುವುದರಿಂದ ಕೋಶಗಳನ್ನು ಮಣ್ಣಿನ ಮೇಲ್ಪದರಿಗೆ ತಂದು ಹಕ್ಕಿಗಳಿಗೆ ಹಾಗೂ ಬಿಸಿಲಿನ ಪ್ರಖರತೆಯಿಂದ ನಿಯಂತ್ರಿಸಬಹುದು. ಆದುದ್ದರಿಂದ ಕಳೆ ಹಾಗೂ ಕಸರಹಿತ ವ್ಯವಸಾಯಕ್ಕೆ ಆದ್ಯತೆ ನೀಡಬೇಕು. ಅಂತರ ಬೆಳೆಯಾಗಿ ಕೀಟ ವಿಕರ್ಷಕ ಬೆಳೆಯ (ಡೆಸ್ಮೋಡಿಯಂ ಪ್ರಭೇದ) ಸುತ್ತಲು ಆಕರ್ಷಕ ಬೆಳೆಗಳಾದ ನೇಪಿಯರ್ ಹುಲ್ಲನ್ನು ಬೆಳೆಯುವುದರಿಂದ ಈ ಕೀಟದ ಹಾವಳಿಯನ್ನು ನಿಯಂತ್ರಿಸಬಹುದೆಂದು ಕಂಡು ಬಂದಿದೆ. ಗೋವಿನ ಜೋಳದ ಜೊತೆಗೆ ಅಲಸಂದಿ, ಬಟಾಣಿ, ಲ್ಯಾಬ್ ಲ್ಯಾಬ್ ಆವರೆ ಯನ್ನು ಅಂತರ ಬೆಳೆಯಾಗಿ ಬೆಳೆಯುವುದರಿಂದಲೂ ಕೀಟ ಬಾಧೆಯನ್ನು ಕಡಿಮೆ ಮಾಡಬಹುದು.

ದೈಹಿಕ ನಿಯಂತ್ರಣ

- ಪತಂಗಗಳ ಚಟುವಟಿಕೆಯನ್ನು ಬೆಳಕಿನ ಬಲೆ ಅಥವಾ ಲಿಂಗಾಕರ್ಷಕ ಬಲೆಗಳಿಂದ ಕಂಡುಕೊಳ್ಳಬಹುದು.
- ವ್ಯಾಪಕವಾಗಿ ಪೀಡೆ ಸಮೀಕ್ಷೆಯನ್ನು ಕೈಗೊಂಡು ಕೀಟದ ಉಪಸ್ತಿತಿ ಮತ್ತು ಅರಡುವಿಕೆಯನ್ನು ತಿಳಿದು ಪ್ರತಿ ಎಕರೆಗೆ 3 ರಂತೆ ಮೋಹಕ ಬಲೆಗಳನ್ನು ಅಳವಡಿಸುವದರ ಮೂಲಕ ನಿಗ ವಹಿಸುವುದು.
- ಗುಂಪಾಗಿರುವ ಮೊಟ್ಟೆ ಹಾಗೂ ಮರಿ ಹುಳುಗಳನ್ನು ಕೈಯಿಂದ ಆಯಿದು ನಾಶ ಪಡಿಸುವುದು.

ಜೈವಿಕ ನಿಯಂತ್ರಣ :

- ಸ್ಪೋಡಾಪ್ಟೀರಾ ಕೀಡೆಗಳ ನಿಯಂತ್ರಣಕ್ಕೆ ಪರಾವಲಂಬಿ ಹಾಗೂ ಪರಭಕ್ಷಕ ಕೀಟ ಹಾಗೂ ರೋಗಗಳನ್ನು ಸ್ಥಳೀಯವಾಗಿ ಗುರುತಿಸಿ ಅವುಗಳನ್ನು ಬೆಳೆಸಿ ಪೋಷಿಸಿ ಬೃಹತ್ ಸಂಖ್ಯೆಯಲ್ಲಿ ಅಭಿವೃದ್ಧಿ ಪಡಿಸಬೇಕಾಗಿದೆ.
- ನಿಸರ್ಗದಲ್ಲಿ ಸ್ಪೋಡಾಪೀರಾ ಫ್ರೂಜಿಫೆರಡಾ ಕೀಟದ ಮೇಲೆ ಟೆಲಿನೋಮಸ್ ರೀಮಸ್ ಮತ್ತು ಟ್ರೈಕೋಗ್ರಾಮಾ ಪ್ರೇಟಿಯೋಸಮ್ ಎಂಬ ಮೊಟ್ಟೆ ಪರತಂತ್ರ ಕೀಟಗಳು ಯಶಸ್ವಿಯಾಗಿವೆ ಎಂದು ಕಂಡು

ಬಂದಿದೆ. ಆದ್ದರಿಂದ, ತತ್ತಿ ಪರಾವಳಂಬಿ ಕೀಟಗಳಾದ ಟ್ರೈಕೋಗ್ರಾಮ ಮತ್ತು ಟೆಲಿಮೋನಸ್‌ಗಳನ್ನು ಬಿಡುಗಡೆಗೊಳಿಸಿ ತತ್ತಿಗಳನ್ನು ನಾಶ ಪಡಿಸುವುದು.

- ನೊಮೊರಿಯಾ ರಿಲೈ 2.0 ಗ್ರಾಂ ಪ್ರತಿ ಲೀಟರ್ ನೀರಿಗೆ ಅಥವಾ ಮೆಟಾರೆಜಿಯಂ ಅನಿಸೋಪ್ಲಿಯೆ ಹಾಗೂ ಬ್ಯಾಸಿಲೆಸ್ ತುರಿಂಜಿಯನ್‌ಸ್ಸಿಸ್ 1.0 ಗ್ರಾಂ. ಅಥವಾ 1.0 ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಿಸಬೇಕು

- ತೀವ್ರತೆ ಬಾಧೆ ಕಡಿಮೆ ಇದ್ದಾಗ ಅಥವಾ ಮರಿ ಹುಳುಗಳ ನಿರ್ವಹಣೆಗೆ ಬೇವಿನ ಮೂಲಕ ಕೀಟನಾಶಕವಾದ ಅಜಾಡೆರಿಕ್ಟಿನ್ 50 ಇ.ಸಿ. 5 ಮಿ.ಲೀ. ಪ್ರತಿ ಲೀ. ನೀರಿಗೆ ಮಿಶ್ರಣ ಮಾಡಿ ಸಿಂಪಡಿಸುವುದು.

ರಾಸಾಯನಿಕ ಕ್ರಮಗಳು :

- ಕೀಟ ತೀವ್ರತೆ ಹೆಚ್ಚಾದಲ್ಲಿ ಅಥವಾ ಬೆಳೆದ ಹುಲುಗಳನ್ನು ಹತೋಟಿಯಲ್ಲಿ ಇಡಲು ಕೀಟನಾಶಕಗಳಾದ ಎಮಾಮೆಕ್ಟಿನ್ ಬೆಂಜೋಯೇಟ್ 5 ಎಸ್.ಜಿ 0.4 ಗ್ರಾಂ. ಅಥವಾ ಲ್ಯಾಮ್ಡಾ ಸೈಹೆಲೋತ್ರಿನ್, 0.5 ಮಿ.ಲೀ., ಅಥವಾ ಕ್ಲೋರಾಂಟ್ರನಿಲಿಪ್ರೊಲ್ 18.5 ಎಸ್.ಸಿ. 0.2 ಮಿ.ಲೀ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಿಬೇಕು ಅಥವಾ ಕ್ಲೋರಾಂಟ್ರನಿಲಿಪ್ರೊಲ್ 0.4 ಜಿ.ಆರ್. ಹರಳುಗಳನ್ನು 2–3 ಹರಳನ್ನು ಸುಳಿಯಲ್ಲಿ ಬಿಳುವಾಗೆ ಹಾಕಬೇಕು (ಎಕರೆಗೆ 4 ಕಿ.ಗ್ರಾಂ.)

- ಹರಳು ರೂಪದ ಕೀಟನಾಶಕ ಕಾರ್ಬೋಫ್ಯುರಾನ್ 3 ಜಿ ಯನ್ನು ಪ್ರತಿ ಹೆಕ್ಟೇರಿಗೆ 7.5 ಕಿ.ಗ್ರಾಂ. ದಂತೆ ಎಲೆಯ ಸುಳಿಗಳಲ್ಲಿ ಹಾಕಬೇಕು.

- ಹುಳುಗಳ ಸಂಖ್ಯೆ ಅತಿಯಾದಾಗ ಕಳಿತ ವಿಷಪಾಷಣವನ್ನು ಬಳಸಬಹುದು. ಪ್ರತಿ ಹೆಕ್ಟೇರಿಗೆ ಬೇಕಾಗುವ 50 ಕಿಲೋ ಭತ್ತ ಅಥವಾ ಗೋದಿಯ ತೌಡಿನ ಮೇಲೆ 5 ಲೀಟರ್ ನೀರಿನಲ್ಲಿ 250 ಮಿ.ಲಿ. ಮೊನೊಕ್ರೋಟೋಫಾಸ್ 36 ಎಸ್.ಎಲ್. ಕೀಟನಾಶಕವನ್ನು 2 ಕಿಲೋ ಗ್ರಾಂ ಬೆಲ್ಲದೊಂದಿಗೆ ಬೆರೆಸಿ ತೌಡಿನ ಮೇಲೆ ಸಿಂಪರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕು. ಈ ಪಾಷಾಣವನ್ನು 1 ರಿಂದ 2 ದಿನ ಗೋಣಿ ಚೀಲದಲ್ಲಿ ಮುಚ್ಚಿಡಬೇಕು. ನಂತರ ಸಾಯಾಂಕಾಲದ ವೇಳೆ ಬೆಳೆಗಳ ಮೇಲೆ ಪಾಷಾಣವನ್ನು ಚಲ್ಲಬೇಕು.

ಗಮನಿಕ: ಕೀಟ ನಾಶಗಳನ್ನು ಬೆಳೆಗೆ ಅಥವಾ ಸಂಜೆಯ ಕಾಲದಲ್ಲಿ ಸಿಂಪರಣೆ ಮಾಡಬೇಕು. ಏಕಂದರೆ, ಈ ಸಮಯದಲ್ಲಿ ಕೀಟಗಳು ಹೆಚ್ಚು ಸಕ್ರಿಯವಾಗಿರುತ್ತವೆ. ಒಂದೆ ರಾಸಾಯನಿಕವನ್ನು ಪದೆ–ಪದೆ ಬಳಸಿದಿರಿ, ಇದರಿಂದ ಕೀಟವು ಪ್ರತಿರೋದವನ್ನು ಬೆಳೆಸಿಕೊಳ್ಳಬಹುದು.

ತೊಗರಿ ಬೆಳೆಯಲ್ಲಿ ಇಳುವರಿ ಹೆಚ್ಚಿಸುವ ಬೇಸಾಯ ಕ್ರಮಗಳು

ಕುಡಿ ಚಿವುಟುವುದು

ತೊಗರಿ ಬೆಳೆಯಲ್ಲಿ ಬಿತ್ತನೆಮಾಡಿದ 50-55 ದಿನಗಳಲ್ಲಿ ಬೆಳೆಯ ಮೇಲ್ಭಾಗದ ಕುಡಿಯನ್ನು 5 – 6 ಸೆಂ.ಮೀ. ರಷ್ಟು ಮೊದಲನೆಯ ಕುಡಿ ಚಿವುಟುವುದರಿಂದ, ಗಿಡಗಳು ಎತ್ತರಕ್ಕೆ ಬೆಳೆಯುವದನ್ನು ತಡೆದು ಹೆಚ್ಚು ಕವಲು ಹೊಡೆಯಲು ಸಹಕರಿಸುತ್ತದೆ. ಇದರಿಂದ ಪ್ರತಿ ಗಿಡಕ್ಕೆ ಕಾಯಿಗಳ ಸಂಖ್ಯೆ ಹೆಚ್ಚಾಗಿ ಶೇ.20 ರಷ್ಟು ಇಳುವರಿ ಹೆಚ್ಚಿಸುತ್ತದೆ. ಜೊತೆಗೆ ಬೆಳೆ ಎತ್ತರಕ್ಕೆ ಬೆಳೆಯುವುದು ಹತೋಟಿಗೆ ಬರುವದರಿಂದ ಸಸ್ಯ ಸಂರಕ್ಷಣೆಗೆ ಸಿಂಪರಣೆ ಮಾಡಲು ಅನುಕೂಲವಾಗುತ್ತದೆ.

ಪಲ್ಸ್ ಮ್ಯಾಜಿಕ್ ಸಿಂಪಡನೆ : ಪ್ರತಿ ಲೀ. ನೀರಿಗೆ 10 ಗ್ರಾಂ. ಪಲ್ಸ್ ಮ್ಯಾಜಿಕ್ ಬೆರೆಸಿ ಶೇ.50 ರಷ್ಟು ಹೂವಾಡುವಾಗ ಮತ್ತು 15 ದಿನಗಳ ನಂತರ ಸಿಂಪರಣೆ ಮಾಡಬೇಕು. ಹೀಗಾಗಿ ಒಂದು ಎಕರೆಗೆ 4 ಕಿ.ಗ್ರಾಂ. ಬೇಕಾಗುತ್ತದೆ. ಈ ಪಲ್ಸ್ ಮ್ಯಾಜಿಕ್‌ನಲ್ಲಿ ದ್ವಿದಳ ಧಾನ್ಯಗಳಿಗೆ ಬೇಕಾಗುವಂತಹ ಮುಖ್ಯ ಹಾಗೂ ಸೂಕ್ಷ್ಮ ಪೋಷಕಾಂಶಗಳು, ಬೆಳೆ ವರ್ಧಕಗಳು ಹಾಗೂ ಸಸ್ಯ ಪ್ರಚೋದಕಗಳು ಇರುತ್ತದೆ. ಇದನ್ನು ಸಿಂಪಡಿಸುವ

ಮೂಲಕ ಹೂವುಗಳು ಉದರದ ಹಾಗೆ ರಕ್ಷಿಸಬಹುದು, ಕಾಯಿಕಟ್ಟುವುದರಲ್ಲಿ ಗಣನೀಯವಾಗಿ ಹೆಚ್ಚಿಸಿ ಇಳುವರಿಯಲ್ಲಿ ಏರಿಕೆ ಕಾಣಬಹುದು.

ಕೀಟ ನಿರ್ವಹಣೆ :

- **ಕಾಯಿ ಕೊರಕ:** ಮರಿ ಹುಳುಗಳು ಪ್ರಾರಂಭದಲ್ಲಿ ಹಸಿರು ಭಾಗವನ್ನು ಕೆರೆದು ತಿನ್ನುತ್ತ ನಂತರ ಹೂವು ಮೊಗ್ಗು ಮತ್ತು ಕಾಯಿಗಳನ್ನು ಕೊರೆಯುತ್ತದೆ. ಮಗ್ಗು ಮತ್ತು ಹೂವುಗಳು ಕೊರೆಯುವದರಿಂದ ಅವು ಉದುರಿ ಕಾಯಿ ಕಟ್ಟುವುದು ಕಡಿಮೆಯಾಗುತ್ತದೆ. ಬಳತ ಉಳುಗಳು ದೇಹದ ಅರ್ದ ಭಾಗವನ್ನು ಕಾಯಿಯೊಳಗೆ ತೂರಿಸಿ ಕಾಯಿ ತಿನ್ನುವುದನ್ನು ಕಾಣಬಹುದು.

ಮೊದಲನೇಯ ಸಿಂಪರಣೆಯಾಗಿ ತತ್ತಿ ನಾಶಕಗಳಾದ ಮಿಥೋಮಿಲ್ (ಲ್ಯಾನೇಟ್ 40 ಎಸ್.ಪಿ.) @ 0.6 ಗ್ರಾಂ. ಅಥವಾ ಪ್ರೋಫೆನೋಫಾಸ್ 50 ಇ.ಸಿ @ 2.0 ಮಿ.ಲೀ/ಲೀ ಅಥವಾ ಥೈಯೋಡಿಕಾರ್ಬ 75 ಎಸ್.ಪಿ. @ 0.6 ಗ್ರಾಂ./ಲೀ ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಎರಡನೆಯ ಸಿಂಪರಣೆ :

1) ರಿನಾಕ್ಸಿಪಿಯರ್ ಕೊರಾಜೆನ್ 18.5 ಎಸ್.ಸಿ @ 0.15 ಮಿ.ಲೀ/ಲೀ
2) ಶೇ.5% ಬೇವಿನ ಬೀಜದ ಕಷಾಯ / ಬೇವಿನ ಮೂಲದ ಕೀಟನಾಶಕ @ 2.0 ಮಿ.ಲೀ/ಲೀ
3) ಮೆಣಸಿನಕಾಯಿ 0.5 % + ಬಳ್ಳೊಳ್ಳಿ 0.25% ಕಷಯ
4) ನವಲುರಾನ್ 10 ಇ.ಸಿ @ 0.75 ಮಿ.ಲೀ/ಲೀ

ಮೂರನೆಯ ಸಿಂಪರಣೆ :

1) ಹೆಲಿಕೋವರ್ಪ ಎನ್.ಪಿ.ವಿ ನಂಜಾಣು ಎಕರೆಗೆ 100 ಎಲ್.ಇ. @ 1.0 ಮೀ.ಲೀ + 1 ಗ್ರಾಂ. ನೀಲಿ ಪುಡಿ + 5 ಗ್ರಾಂ. ಬೆಲ್ಲಾ / ಲೀ. ನೀರಿಗೆ
2) ಪ್ಲೊಬೆಂಡಿಯೊಮ್ಮೈಡ್ 480 ಎಸ್.ಸಿ @ 0.1 ಮಿ.ಲೀ/ಲೀ

ನಾಲ್ಕನೆಯ ಸಿಂಪರಣೆ :

1) ಇಂಡಾಕ್ಸಾಕಾರ್ಬ (ಅವಾಂಟ್ 14.5 ಎಸ್.ಸಿ) 0.3 ಮಿ.ಲೀ
2) ಸ್ಟೈನೋಸ್ಯಾಡ್ 45 ಎಸ್.ಸಿ @ 0.1 ಮಿ.ಲೀ./ಲೀ
3) ಇಮಾಮೆಕ್ಟಿನ್ ಬೆಂಜೊಯೆಟ್ 5 ಎಸ್.ಜಿ 0.2 ಗ್ರಾಂ./ಲೀ.
4) ಕೋರೆಂಟ್ರನಿಲಪ್ರೋಲ್ 18.5 ಎಸ್.ಸಿ. 0.15 ಮಿ.ಲೀ
5) ಪ್ಲೊಬೆಂಡಿಯಾಮ್ಮೈಡ್ 20 ಡಬ್ಲೂ.ಪಿ. @ 0.2 ಗ್ರಾಂ.
6) ನವಲುರಾನ್ 10 ಇ.ಸಿ @ 0.75 ಎಮ್.ಎಲ್

ಮೆಣಸಿನಕಾಯಿ ಬೆಳೆಗಳಿಗೆ ಬರುವ ಕೀಟಗಳು ಹಾಗೂ ಅವುಗಳ ಹತೋಟಿ ಕ್ರಮಗಳು

1) ಥ್ರಿಪ್ಸನುಸಿ: ಈ ಕೀಟವು ಎಲೆ, ಮೊಗ್ಗು, ಹೂವು ಮತ್ತು ಗಿಡಗಳ ಇತರ ಭಾಗಗಳಿಂದ ರಸ ಹೀರುವದರಿಂದ ಗಿಡಗಳ ಬೆಳವಣಿಗೆ ಕುಂಠಿತವಾಗುವದಲ್ಲದೇ ಹೊಸ ಚಿಗುರು, ಎಲೆಗಳು ಹಾಗೂ ಮೊಗ್ಗುಗಳು ಸಣ್ಣದಾಗುವವು. ಎಲೆಗಳು ಆಕಾಶದಕಡೆಗೆ ಮುದುಡುವವು. ಇದಕ್ಕೆ ಹೊರ ಮುಟುರು ರೋಗ ಎಂದು ಕರೆಯುತ್ತಾರೆ. ಗಿಡಗಳಲ್ಲಿ ಹೂವು ಮತ್ತು ಕಾಯಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುವದರಿಂದ ಇಳುವರಿ ಬಹಳಷ್ಟು ನಷ್ಟವಾಗುತ್ತದೆ.

ಹತೋಟಿ ಕ್ರಮಗಳು: ಈ ಕೀಟದ ಬಾಧೆಕಂಡ ತಕ್ಷಣ 2 ಮಿ.ಲೀ ಡೈಮಿಥೊಯೇಟ್ ಅಥವಾ 0.3 ಗ್ರಾಂ ಥೈಯೋಮಿಥಾಕ್ಸಾಮ್ ಅಥವಾ 5 ಗ್ರಾಂ ವರ್ಟಿಸಿಲಿಯಂ ಲೆಕೇನಿ ಹಾಗೂ ನೀರಿನಲ್ಲಿ ಕರಗುವ 19:19:19 (NPK) ಗೊಬ್ಬರವನ್ನು ಪ್ರತಿ ಲೀಟರ್ ನೀರಿನಲ್ಲಿ 4 ಗ್ರಾಂ ಅಥವಾ ಯೂರಿಯಾ 2 ಗ್ರಾಂ ಕೂಡಿಸಿ ಸಿಂಪರಣೆ ಮಾಡಿರಿ.

2) ಜೇಡುನುಸಿ: ಈ ಕೀಟವುಗಿಡದಲ್ಲಿದ್ದರೂ ಕಣ್ಣಿಗೆ ಕಾಣಿಸುವದಿಲ್ಲ. ಅತೀ ಸಣ್ಣ ಗಾತ್ರದ ಕೀಟವು ಗಿಡಗಳ ಎಲೆ ಮತ್ತು ಹೊಸ ಚಿಗುರುಗಳಿಂದ ರಸವನ್ನು ಹೀರಿ ಗಿಡಗಳ ಎಲೆಗಳು ಕೆಳಗೆ ಬಾಗುವಂತೆ ಮಾಡುವದು (ಒಳ

ಮುಟುರು ರೋಗ). ಇದರಿಂದ ಗಿಡಗಳಲ್ಲಿ ಹೂವು ಹಾಗೂ ಮೊಗ್ಗು ಕಾಣಿಸದೇ ನಂಜು ರೋಗಕ್ಕೆ ತುತ್ತಾದಂತೆ ಗಿಡವು ಕಾಣಿಸುವದು. ಈ ರೋಗದಿಂದ ಗಿಡಗಳಲ್ಲಿ ಹೂವು, ಕಾಯಿ ಮತ್ತು ಹಣ್ಣುಗಳ ಸಂಖ್ಯೆ ಕಡಿಮೆಯಾಗಿ ಇಳುವರಿ ಬಹಳಷ್ಟು ನಷ್ಟವಾಗುವದು.

ಹತೋಟಿ ಕ್ರಮಗಳು: ಈ ಕೀಟದಿಂದ ಉಂಟಾದ ನಂಜು ರೋಗದ ಲಕ್ಷಣಗಳು ಕಂಡ ತಕ್ಷಣ ಡೈಕೋಪಾಲ್ 2.5 ಮಿ.ಲೀ ಅಥವಾ ಡೈಫೆಂತುರಿಯಾನ್ 1.5 ಗ್ರಾಂ ಮತ್ತು ನೀರಿನಲ್ಲಿ ಕರಗುವ 19:19:19 (NPK) ಗೊಬ್ಬರವನ್ನು 4 ಗ್ರಾಂ ಅಥವಾ ಯೂರಿಯ 2 ಗ್ರಾಂ ನಂತೆ ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.

3) ಕಾಯಿ ಕೊರಕ: ಈ ಕೀಟಗಳು ಮೊಗ್ಗು ಹಾಗೂ ಕಾಯಿಗಳಲ್ಲಿ ರಂಧ್ರ ಮಾಡಿತಿನ್ನುತ್ತವೆ. ಇದರಿಂದರಂಧ್ರದಲ್ಲಿ ಮಳೆ ನೀರು ಹೊಕ್ಕು ಮೊಗ್ಗು ಮತ್ತು ಕಾಯಿಗಳು ಉದುರುವದರಿಂದ ಇಳುವರಿ ನಷ್ಟವಾಗುತ್ತದೆ.

ಹತೋಟಿ ಕ್ರಮಗಳು: ಕಾಯಿ ಕೊರಕದ ಹತೋಟಿಗೆ ಶೇಕಡಾ 5 ರ ಬೇವಿನ ಬೀಜದ ಕಷಾಯವನ್ನು ಬಿತ್ತಿದ 7-8 ವಾರಗಳ ನಂತರ ಸಿಂಪರಣೆ ಮಾಡಿ ಹತೋಟಿ ಮಾಡಬೇಕು. ಅಲ್ಲದೇಎನ್.ಪಿ.ವ್ಹಿ 250 ಎಲ್.ಇಅಥವಾ ಪ್ರೊಫೇನೊಫಾಸ್ 2 ಗ್ರಾಂ ಅಥವಾ ಪ್ಲೂಬೆಂಡಿಮೈಡ್ 0.1 ಮಿ.ಲೀ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಬೆರೆಸಿ ಬಿತ್ತಿದ ಹನ್ನೊಂದು ವಾರಗಳ ನಂತರ ಸಿಂಪರಣೆ ಮಾಡಬಹುದು.

ಮೆಣಸಿನಕಾಯಿ ಬೆಳೆಗಳಿಗೆ ಬರುವ ರೋಗಗಳು ಹಾಗೂ ಅವುಗಳ ಹತೋಟಿ ಕ್ರಮಗಳು

1) **ಬೂದಿ ರೋಗ** : ಬೂದಿ ರೋಗ ನಿಯಂತ್ರಿಸಲು ರೋಗ ಕಂಡ ತಕ್ಷಣ ಸುಡೋಮೊನಾಸ್ ಪ್ಲೋರೋಸೆನ್ಸ್ 5 ಗ್ರಾಂ ಪ್ರತಿ ಲೀಟರ ನೀರಿಗೆ ಬೆರೆಸಿ 8 ದಿನಗಳ ಅಂತರದಲ್ಲಿ 2-3 ಸಲ ಸಿಂಪರಣೆ ಮಾಡಬೇಕು ಅಥವಾ 0.5 ಗ್ರಾಂ ಮೈಕ್ಲೋಬ್ಯುಟಾನಿಲ್ 10 ಡಬ್ಲೂಪಿ ಅಥವಾ 1 ಮಿ.ಲೀ ಪೆನ್‌ಕೋನಾಜೋಲ್ 25 ಇ.ಸಿ ಅಥವಾ 0.5 ಮಿ.ಲೀ ಡೈಫೆನ್‌ಕೋನಾಜೋಲ್ 25 ಇ.ಸಿ ಪ್ರತಿ ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು.

2) **ಚಿಬ್ಬುರೋಗ / ಹಣ್ಣು ಕೊಳೆ ರೋಗ**: ರೋಗ ಕಂಡ ತಕ್ಷಣ ಶಿಲೀಂಧ್ರ ನಾಶಕಗಳಾದ 1 ಗ್ರಾಂ ಕಾರ್ಬನ್‌ಡೈಜಿಯಂ 50 ಡಬ್ಲೂಪಿ ಅಥವಾ 1 ಮಿ.ಲೀ ಪ್ರೊಪಿಕೋನಾಜೋಲ್ 25 ಇ.ಸಿ ಅಥವಾ 1.5 ಮಿ.ಲೀ ಟೆಬುಕೋನಾಜೋಲ್ ಪ್ರತಿ ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು.

3) **ಮೆಣಸಿನಕಾಯಿಯಲ್ಲಿ ಅಫ್ಲಾಟಾಕ್ಸಿನ್ ವಿಷದ ಸೋಂಕು**: ಮೆಣಸಿನಕಾಯಿ ಮಾಗುವ ಹಂತದಲ್ಲಿ 5 ಗ್ರಾಂ ಸುಡೊಮೊನಾಸ್ ಫ್ಲೊರೆಸೆನ್ಸ್‌ಅನ್ನು ಪ್ರತಿ ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಈರುಳ್ಳಿ ಬೆಳೆಯಲ್ಲಿ ಬರುವ ಕೀಟ-ರೋಗಗಳು ಹಾಗೂ ಅವುಗಳ ನಿರ್ವಹಣೆ

ಈರುಳ್ಳಿ ಬೆಳೆಗಳಿಗೆ ಬರುವ ಕೀಟಗಳು ಹಾಗೂ ಅವುಗಳ ಹತೋಟಿ ಕ್ರಮಗಳು

1) **ಥ್ರಿಪ್ಸ್ ನುಶಿ**: ಎಲೆಗಳ ಸುಳಿಯಲ್ಲಿ ಮತ್ತು ಎಲೆಯ ಕೆಳಗೆ ಕುಳಿತು ರಸ ಹೀರುತ್ತವೆ. ಎಲೆಗಳ ಮೇಲೆ ಬಿಳಿಯಾದ ಮಚ್ಚೆಗಳು ಕಾಣಿಸಿ ನಂತರ ಒಣಗುತ್ತವೆ. ಇದರ ಹತೋಟಿಗಾಗಿ ಪ್ರತಿ ಕಿಲೋ ಬಿತ್ತನೆ ಬೀಜಕ್ಕೆ15 ಮಿ.ಲೀ ಇಮಿಡಾಕ್ಲೋಪ್ರಿಡ್ 60 ಎಫ್.ಎಸ್‌ನಿಂದ ಬೀಜೋಪಚಾರ ಮಾಡಬೇಕು ಮತ್ತು 1.7 ಮಿ.ಲೀ ಡೈಮಿಥೋಯೇಟ್ 30 ಇ.ಸಿ ಅಥವಾ 0.5 ಮಿ.ಲೀ ಫಾಸ್ಫಾಮಿಡಾನ್ 85 ಡಬ್ಲೂ.ಎಸ್.ಸಿ ಪ್ರತಿ ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು.

2) **ಕತ್ತರಿಸುವ ಹುಳು**: ಮರಿ ಹುಳುಗಳು ಎಳೆ ಗಿಡಗಳ ಕಾಂಡವನ್ನು ಭೂಮಿಯ ಮೇಲ್ಭಾಗಕ್ಕೆ ಕತ್ತರಿಸುತ್ತವೆ. ಅಂತಹ ಗಿಡಗಳು ಕೆಳಗೆ ಬಿದ್ದು ಕ್ರಮೇಣ ಒಣಗುತ್ತವೆ. ಈ ಕೀಟದ ಹತೋಟಿಗಾಗಿ ಪ್ರತಿ ಲೀಟರ ನೀರಿಗೆ 0.15 ಮಿ.ಲೀ ಕ್ಲೊರಾಂಟ್ರನಿಪ್ರೋಲ್ 18.5 ಎಸ್.ಸಿ ಅಥವಾ 2 ಮಿ.ಲೀ ಕ್ವಿನಾಲ್‌ಫಾಸ್ 25 ಇ.ಸಿ ಬೆರೆಸಿ ಗಿಡದ ಸುತ್ತಲೂ ತೊಯಿಸಬೇಕು.

ಈರುಳ್ಳಿ ಬೆಳೆಗಳಿಗೆ ಬರುವ ರೋಗಗಳು ಹಾಗೂ ಅವುಗಳ ಹತೋಟಿ ಕ್ರಮಗಳು

1) **ನೇರಳೆ ಎಲೆ ಮಚ್ಚೆ ರೋಗ**: ರೋಗವು ಮೊದಲಿಗೆ ಬಿಳಿ ಬಣ್ಣದಿಂದ ನೇರಳೆ ಬಣ್ಣಕ್ಕೆ ಪರಿವರ್ತನೆಗೊಂಡು, ಆಮೇಲೆ ಎಲೆಗಳು ಒಣಗುತ್ತವೆ. ಇದರ ಹತೋಟಿಗಾಗಿ ಬೀಜವನ್ನು 2 ಗ್ರಾಂಕ್ಯಾಪ್ಟಾನ್ 80 ಡಬ್ಲೂಪಿ

ಪ್ರತಿ ಕಿಲೋ ಬೀಜಕ್ಕೆ ಉಪಚರಿಸಬೇಕು ಮತ್ತು 1 ಮಿ.ಲೀ ಡೈಫೆನ್ ಕೋನಾಜೋಲ್ 25 ಇ.ಸಿ ಅಥವಾ 2.5 ಗ್ರಾಂ ಕ್ಯುಪ್ರುಸ್ ಆಕ್ಸೈಡ್ ಪ್ರತಿ ಲೀಟರ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

2) **ಸುಳಿ ರೋಗ:** ಈ ರೋಗವು ಲಘು ಪೋಷಕಾಂಷಗಳ ಕೊರತೆ, ನೆಮ್ಯಾಟೋಡ್ ದುಂಡಾಣುಗಳ ಸಂಖ್ಯೆ ಹೆಚ್ಚಾಗಿದ್ದರೆ ಮತ್ತು ಮಣ್ಣಿನಲ್ಲಿ ತೇವಾಂಶ ಹೆಚ್ಚಾಗಿದ್ದರೆ ಕಾಣಿಸಿಕೊಳ್ಳುತ್ತದೆ. ಇದರ ಹತೋಟಿಗಾಗಿ ಬಿತ್ತುವ ಪೂರ್ವದಲ್ಲಿ ಪ್ರತಿ ಎಕರೆಗೆ 100 ಕಿಲೋ ಬೇವಿನ ಹಿಂಡಿ ಹಾಕಬೇಕು. ರೋಗ ಕಾಣಿಸಿಕೊಂಡ ತಕ್ಷಣ 2 ಮಿ.ಲೀ ಹೆಕ್ಸಾಕೋನಾಜೋಲ್, 2 ಗ್ರಾಂ 19:19:19 ಗೊಬ್ಬರ, 2 ಗ್ರಾಂ 13:0:45 ಗೊಬ್ಬರ ಮತ್ತು 2 ಗ್ರಾಂ ಲಘು ಪೋಷಕಾಂಶಗಳನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

ಸೇವಂತಿಗೆ ಬೆಳೆಯಲ್ಲಿ ಬರುವ ಕೀಟ-ರೋಗಗಳು ಹಾಗೂ ಅವುಗಳ ನಿರ್ವಹಣೆ, ಕೊಯ್ಲು ಮತ್ತು ಇಳುವರಿ

ಸೇವಂತಿಗೆ ಹೂವಿನಲ್ಲಿ ರೋಗ ಮತ್ತು ಕೀಟಗಳ ಸರಿಯಾದ ನಿರ್ವಹಣೆಯಿಂದ ಹೂವಿನ ಗುಣಮಟ್ಟ ಮತ್ತು ಇಳುವರಿಯನ್ನು ಹೆಚ್ಚಿಸಬಹುದು. ಈ ಬೆಳೆಗೆ ಬರುವ ಪ್ರಮುಖ ಕೀಟ ಹಾಗೂ ರೋಗಗಳು ಮತ್ತು ಅವುಗಳ ನಿಯಂತ್ರಣ ಕ್ರಮಗಳು ಈ ಕೆಳಗಿನಂತಿವೆ.

1) **ಕೀಟಗಳು:**

- **ಹೇನು ಮತ್ತು ಥ್ರಿಪ್ಸ್:** ಇವು ರಸವನ್ನು ಹೀರಿ ಬೆಳೆಯ ಬೆಳವಣಿಗೆಯನ್ನು ಕುಂಠಿತವಾಗಿಸುತ್ತವೆ. ಇದರ ಹತೋಟಿಗಾಗಿ ಪ್ರತಿ ಲೀಟರ ನೀರಿಗೆ 0.25 ಗ್ರಾಂ ಥೈಯೊಮಿಥಾಕ್ಸಾಮ್ 25 ಡಬ್ಲ್ಯು.ಡಿ.ಜಿ ಅಥವಾ 1 ಗ್ರಾಂ ಅಸಿಫೇಟ್ 75 ಎಸ್.ಪಿ ಅಥವಾ 0.2 ಗ್ರಾಂ ಅಸಿಟಮಾಪ್ರಿಡ್ 20 ಎಸ್.ಸಿ ಬೆರೆಸಿ ಸಿಂಪರಣೆ ಮಾಡಬೇಕು.
- **ಮೊಗ್ಗು ಕೊರೆಯುವ ಹುಳು:** ಈ ಕೀಟಗಳು ಮೊಗ್ಗುಗಳನ್ನು ಕೊರೆದು ತಿನ್ನುತ್ತವೆ. ನಂತರ ಈ ಮೊಗ್ಗುಗಳು ಅರಳಿದಾಗ ಅರ್ಧ ಅರಳಿದ ಹೂಗಳು ಸಿಗುತ್ತವೆ. ಇದರ ಹತೋಟಿಗಾಗಿ 2 ಮಿ.ಲೀ ಪ್ರೊಪಿನೋಫಾಸನ್ನು ಅಥವಾ 0.4 ಗ್ರಾಂ ಎಮಾಮೆಕ್ಟಿನ್ ಬೆಂಜೋಯೇಟ್ ನ್ನು ಪ್ರತಿ ಲೀಟರ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು.

2) **ಪ್ರಮುಖ ರೋಗಗಳು:**

- **ಹಳದಿ ನಂಜು ರೋಗ:** ಇದು ವೈರಸ್ ನಂಜಾಣುಗಳಿಂದ ಬರುವಂತಹ ರೋಗ. ಇದನ್ನು ನಿಯಂತ್ರಣ ಮಾಡಲು ಬಾಧೆಗೆ ಒಳಗಾದ ಗಿಡಗಳನ್ನು ಕಿತ್ತು ಸುಡಬೇಕು. ನಂತರ ಪ್ರತಿ ಲೀಟರ ನೀರಿಗೆ 0.3 ಮಿ.ಲೀ ಇಮಿಡಾಕ್ಲೋಪ್ರಿಡ್‌ನ್ನು ಬೆರೆಸಿ ಸಿಂಪಡಿಸಿ ರೋಗ ಹರಡುವ ಕೀಟಗಳನ್ನು ನಿಯಂತ್ರಣ ಮಾಡಬೇಕು.
- **ಎಲೆಚುಕ್ಕೆ ರೋಗ:** ಈ ರೋಗವು ಎಲೆಗಳ ಮೇಲೆ ಕರಿ ಚುಕ್ಕೆಗಳ ಆಕಾರದಲ್ಲಿ ಕಾಣಿಸಿಕೊಂಡು ನಂತರ ಒಂದಕ್ಕೊಂದು ಕೂಡಿಕೊಂಡು ಸುಟ್ಟಹಾಗೆ ಕಾಣಿಸುತ್ತವೆ. ಇದರ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿಗೆ 1 ಮಿ.ಲೀ ಪ್ರೊಪಿಕೊನಾಜೋಲ(25 ಇ.ಸಿ) ಕೂಡಿಸಿ ಸಿಂಪರಣೆ ಮಾಡಬೇಕು.

ಕೊಯ್ಲು ಮತ್ತು ಇಳುವರಿ:

ನಾಟಿ ಮಾಡಿದ ಮೂರುವರೆ ತಿಂಗಳಲ್ಲಿ ಹೂಗಳು ಬರಲು ಆರಂಭವಾಗಿ 45 ದಿನಗಳವರೆಗೆ ಮುಂದುವರೆಯುತ್ತವೆ. ಪ್ರತಿ ಎಕರೆಗೆ 4 ರಿಂದ 6 ಟನ್ ಹೂವಿನ ಇಳುವರಿಯನ್ನು ನಿರೀಕ್ಷಿಸಬಹುದು. ಸೇವಂತಿಗೆ ಹೂವನ್ನು ಕಟಾವು ಮಾಡಿ ದೂರದ ಊರಿಗೆ ಸಾಗಣೆ ಮಾಡುವುದಾದರೆ ಹೂಗಳು ತಾಜಾ ಇರಬೇಕೆಂದರೆ ಪ್ರತಿ ಲೀಟರ ನೀರಿಗೆ 2 ಗ್ರಾಂ ಸಕ್ಕರೆಯನ್ನು ಬೆರೆಸಿ ಹೂಗಳಿಗೆ ಸಿಂಪರಣೆ ಮಾಡಬೇಕು. ಇದರಿಂದ ಹೂವುಗಳನ್ನು ಬಾಡದ ಹಾಗೆ ಇಡಬಹುದು.

ಮಾವಿನ ಬೆಳೆಯಲ್ಲಿ ತಿಂಗಳುವಾರು ಅನುಸರಿಸಬೇಕಾದ ಬೇಸಾಯ ಕ್ರಮಗಳು

ಜುಲೈ:

- ಕೊಟ್ಟಿಗೆ ಗೊಬ್ಬರ : 25 ಕಿಲೋ ಪ್ರತಿ ಗಿಡಕ್ಕೆ ಹಾಕಬೇಕು
- ಮೊದಲನೇಯ ಕಂತಿನಲ್ಲಿ ಸಾರಜನಕ, ರಂಜಕ ಹಾಗೂ ಪೊಟ್ಯಾಷ ಪೋಷಕಾಂಶಗಳನ್ನು ಬೆಳೆಗಳಿಗೆ ಒದಗಿಸಲು ಈ ಕೆಳಗಿನಂತೆ ರಾಸಾಯನಿಕ ಗೊಬ್ಬರಗಳನ್ನು ಪ್ರತಿ ಗಿಡಕ್ಕೆ ನೀಡಬೇಕಾಗುತ್ತದೆ.

ಗಿಡಗಳ ವಯಸ್ಸು	ಯುರಿಯಾ (ಗ್ರಾಂ)	ಡಿ.ಎ.ಪಿ. (ಗ್ರಾಂ)	ಪೊಟ್ಯಾಷ (ಗ್ರಾಂ)
1	80	25	60
2	150	40	115
3	240	60	170
4	320	80	225
5	400	100	280
6	475	117	340
7	550	137	395
8	635	156	450
9	712	157	507
10 ನೇ ವರ್ಷ ಹಾಗೂ ನಂತರ	813	217	581

ಮಾವು ಬೆಳೆಗೆ ಸತುವು, ಕಬ್ಬಿಣ, ಗಂಧಕ, ಕ್ಯಾಲ್ಸಿಯಂ ಮೊದಲಾದ ಲಘು ಪೋಷಕಾಂಶಗಳ ಅವಶ್ಯಕತೆ ಇದ್ದು, ಇವುಗಳನ್ನು ಬೆಳೆಗೆ ನೀಡುವುದು ಸೂಕ್ತ.

ಗಿಡಗಳ ವಯಸ್ಸು	ಸತುವಿನ ಸಲ್ಫೇಟ್ (ಗ್ರಾಂ)	ಕಬ್ಬಿಣ ಸಲ್ಫೇಟ್ (ಗ್ರಾಂ)	ಜಿಪ್ಸಂ (ಕಿಲೋ)
1	15	15	0.5
2	25	25	1.0
3	40	40	1.5
4	50	50	2.0
5	60	60	2.5
6 ನೇ ವರ್ಷ ಹಾಗೂ ನಂತರ	250	250	5.0

- ಕೆಂಪು ಜೇಡರ ನುಸಿ ಬಾಧೆ ಕಾಣಿಸಿಕೊಂಡರೆ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕ ಅಥವಾ 2 ಮಿ.ಲೀ ಡೈಕೋಫಾಲ್ ಅಥವಾ 1 ಗ್ರಾಂ ಇಂಟರಪ್ರಿಡ್ ಔಷಧಿಗಳನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
- ಎಲೆ ತಿನ್ನುವ ಮೂತಿ ಹುಳುಗಳ ಬಾಧೆ ಕಂಡು ಬಂದರೆ 1 ಮಿ.ಲೀ ಪ್ರೊಫೆನೋಫಾಸ್ ಅಥವಾ 1 ಗ್ರಾಂ ಎಸಿಫೇಟ್ ಅಥವಾ 1 ಮಿ.ಲೀ ಲ್ಯಾಮಡಾ ಸಿಲೋಥ್ರಿನ್ ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

ಅಗಸ್ಟ :

- ಗಿಡದ ಸುತ್ತಲೂ ಬೆಳೆದ ಕಳೆ ನಿಯಂತ್ರಣ ಮಾಡಬೇಕು.
- ಬಿದ್ದ ಮಳೆ ನೀರು ಹರಿದು ಹೋಗದಂತೆ ಮಾಡಿ, ಅಲ್ಲಿಯೇ ಇಂಗುವಂತೆ ವ್ಯವಸ್ಥೆ ಮಾಡಬೇಕು.

ಸಪ್ಟೆಂಬರ:

- ಎರಡನೇಯ ಕಂತಿನ ಸಾರಜನಕ, ರಂಜಕ ಹಾಗೂ ಪೊಟ್ಯಾಷ ಪೋಷಕಾಂಶಗಳನ್ನು ಬೆಳೆಗಳಿಗೆ ಒದಗಿಸಲು ಈ ಕೆಳಗಿನಂತೆ ರಾಸಾಯನಿಕ ಗೊಬ್ಬರಗಳನ್ನು ಪ್ರತಿ ಗಿಡಕ್ಕೆ ನೀಡುವುದು ಅವಶ್ಯಕ.

ಗಿಡಗಳ ವಯಸ್ಸು	ಯುರಿಯಾ (ಗ್ರಾಂ)	ಡಿ.ಎ.ಪಿ. (ಗ್ರಾಂ)	ಪೊಟ್ಯಾಷ (ಗ್ರಾಂ)
1	80	25	60
2	150	40	115
3	240	60	170
4	320	80	225
5	400	100	280
6	475	117	340
7	550	137	395
8	635	156	450
9	712	157	507
10 ನೇ ವರ್ಷ ಹಾಗೂ ನಂತರ	813	217	581

ಮಾವು ಬೆಳೆಯಲ್ಲಿ ಲಘು ಪೋಷಕಾಂಶಗಳಾದ ಸತುವು, ಕಬ್ಬಿಣ, ಗಂಧಕ, ಕ್ಯಾಲ್ಸಿಯಂ ಮೊದಲಾದ ಲಘು ಪೋಷಕಾಂಶಗಳ ಅವಶ್ಯಕತೆ ಇದ್ದು, ಇವುಗಳನ್ನು ಒದಗಿಸಲು ಈ ಕೆಳಗಿನಂತೆ ರಾಸಾಯನಿಕಗಳನ್ನು ಬೆಳೆಗೆ ನೀಡುವುದು ಸೂಕ್ತ.

ಗಿಡಗಳ ವಯಸ್ಸು	ಸತುವಿನ ಸಲ್ಫೇಟ್ (ಗ್ರಾಂ)	ಕಬ್ಬಿಣ ಸಲ್ಫೇಟ್ (ಗ್ರಾಂ)	ಜಿಪ್ಸಂ(ಕಿಲೋ)
1	15	15	0.5
2	25	25	1.0
3	40	40	1.5
4	50	50	2.0
5	60	60	2.5
6 ನೇ ವರ್ಷ ಹಾಗೂ ನಂತರ	250	250	5.0

- ಮಾವಿನ ಗಿಡಗಳಿಗೆ ಲಘು ಪೋಷಕಾಂಶಗಳನ್ನು ಒದಗಿಸಲು ಮ್ಯಾಂಗೊ ಸ್ಪೇಶಲನ್ನು ಪ್ರತಿ ಲೀಟರ ನೀರಿಗೆ 5 ಗ್ರಾಂ ನಂತೆ ಬೆರೆಸಿರಿ. ಅದರೊಂದಿಗೆ ಪ್ರತಿ 15 ಲೀಟರ ಟಾಕಿಗೆ 1 ಲಿಂಬೆ ಹಣ್ಣಿನ ರಸ ಹಾಗೂ 1 ಶಾಂಪೂ ಪ್ಯಾಕೇಟನ್ನು ಹಾಕಿ ಸಿಂಪರಣೆ ಮಾಡಬೇಕು. ಇದರಿಂದ ಎಲೆಯು ಪೋಷಕಾಂಶಗಳನ್ನು ಹೀರಿಕೊಳ್ಳಲು ಸಹಾಯಕವಾಗುತ್ತದೆ.

- ನೀರಾವರಿ ಸೌಲಭ್ಯವುಳ್ಳ ರೈತರು ಮಾವಿನ ಬೆಳೆಗೆ ಸೆಪ್ಟೆಂಬರ ತಿಂಗಳಿನಲ್ಲಿ ಗೊಬ್ಬರ ಕೊಟ್ಟ ನಂತರ ಒಂದು ನೀರು ಹಾಯಿಸಿ ನಂತರ ಹೂ ಹಾಗೂ ಕಾಯಿ ಹಿಡಿಯುವ ತನಕ ನೀರು ಕೊಡಬಾರದು. ಹೂ ಹಾಗೂ ಕಾಯಿ ಹಿಡಿದ ನಂತರ ಎಪ್ರಿಲ್ ತಿಂಗಳವರೆಗೆ ತೆಳುವಾಗಿ ನೀರು ನೀಡುವುದು ಸೂಕ್ತ.

ಗೋಡಂಬಿ ಬೆಳೆಯಲ್ಲಿ ತಿಂಗಳುವಾರು ಅನುಸರಿಸಬೇಕಾದ ಬೇಸಾಯ ಕ್ರಮಗಳು

ಜುಲೈ:

- ಸಣ್ಣ ಗಿಡಗಳಲ್ಲಿ ಹೊಸ ಚಿಗುರು ಪ್ರಾರಂಭವಾಗುತ್ತದೆ
- ಹೊಸದಾಗಿ ನಾಟಿಯನ್ನು ಕೈಗೊಳ್ಳಬಹುದು

ಅಗಸ್ಟ್:

- ಕಳೆ ನಿಯಂತ್ರಣ: ಗಿಡದ ಸುತ್ತಲೂ ಬೆಳೆದ ಕಳೆ ನಿಯಂತ್ರಣ ಮಾಡಬೇಕು.
- ಬಿದ್ದ ಮಳೆ ನೀರು ಹರಿದು ಹೋಗದಂತೆ ಮಾಡಿ ಅಲ್ಲಿಯೇ ಇಂಗುವಂತೆ ವ್ಯವಸ್ಥೆ ಮಾಡಬೇಕು.
- **ಗೊಬ್ಬರ ನಿರ್ವಹಣೆ:** ಆಗಸ್ಟ್ 3ನೇ ವಾರದಿಂದ ಸೆಪ್ಟೆಂಬರ್ ವರೆಗೆ ಗೊಬ್ಬರಕೊಡುವುದು. ಈ ಕೆಳಗಿನಂತೆ ಕೊಟ್ಟಿಗೆ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಪ್ರತಿಗಿಡಕ್ಕೆ ಹಾಕಬೇಕು.

ವರ್ಷ	ಯೂರಿಯಾ	ಸೂಪರ್ ಫಾಸ್ಫೇಟ್/ಶಿಲಾರಂಜಕ (ಗ್ರಾಂ.ಗಳಲ್ಲಿ ಪ್ರತಿಗಿಡಕ್ಕೆ)	ಮ್ಯಾರೇಟ್ಆಫ್ ಪೊಟ್ಯಾಷ್	ಕೊಟ್ಟಿಗೆಗೊಬ್ಬರ (ಕಿ.ಗ್ರಾಂ)
1 ನೇ ವರ್ಷ	130	300	100	10
2 ನೇ ವರ್ಷ	260	600	200	10
3 ನೇ ವರ್ಷ	500	600	200	20
4-8 ನೇ ವರ್ಷ	500	600	800	20
9 ವರ್ಷದಿಂದ	1000	1200	800	20

ಗಿಡಗಳ ಬೆಳವಣಿಗೆಗೆ ಅನುಗುಣವಾಗಿ, ಬುಡದಿಂದ 2 ಅಡಿಯಿಂದ 6ಅಡಿ ದೂರದಲ್ಲಿಗಿಡದ ಸುತ್ತಲೂ ವೃತ್ತಾಕೃತಿಯಲ್ಲಿ ಅರ್ಧ ಅಡಿ ಆಳದ, 1 ಅಡಿ ಅಗಲದ ಗುಣಿ ತೆಗೆದು ಗೊಬ್ಬರ ಕೊಟ್ಟು ಮಣ್ಣು ಮುಚ್ಚುವುದು.

ಸಸ್ಯ ಸಂರಕ್ಷಣೆ: ಸಣ್ಣ ಗಿಡಗಳಲ್ಲಿ ಎಲೆ ತಿನ್ನುವ ಹುಳು, ಟೀ ಸೊಳ್ಳೆ ಬಾಧೆಕಂಡು ಬಂದರೆ ಕ್ವಿನಾಲ್‌ಫಾಸ್ 2ಮೀ.ಲೀ. ಪ್ರತಿ ಲೀಟರ ನೀರಿಗೆ ಸೇರಿಸಿ ಸಿಂಪರಣೆ ಮಾಡಬೇಕು.

ಸೆಪ್ಟೆಂಬರ್:

- **ಗೊಬ್ಬರ ನಿರ್ವಹಣೆ:** ಅಗಸ್ಟ ತಿಂಗಳಿನಲ್ಲಿ ಗೊಬ್ಬರ ಕೊಡಲು ಸಾಧ್ಯವಾಗದಿದ್ದರೆ ಮಣ್ಣಿನಲ್ಲಿ ನೀರಿನ ತೇವಾಂಶ ಅನುಸರಿಸಿ ಸೆಪ್ಟೆಂಬರ್ ಕೊನೆಯವರೆಗೆ ಗೊಬ್ಬರ ಕೊಡಬಹುದು (ಅಗಸ್ಟ ತಿಂಗಳಲ್ಲಿ ತಿಳಿಸಿದ ಗೊಬ್ಬರ ನಿರ್ವಹಣೆಯನ್ನು ಅನುಸರಿಸಬೇಕು).
- **ಸಸ್ಯ ಸಂರಕ್ಷಣೆ:** ಸಣ್ಣ ಗಿಡಗಳಲ್ಲಿ ಎಲೆ ತಿನ್ನುವ ಹುಳು, ಟೀ ಸೊಳ್ಳೆ ಬಾಧೆ ಕಂಡು ಬಂದರೆ ಲ್ಯಾಮ್ಡಾಸೈಲೋಥ್ರಿನ್ 1.25 ಮಿ.ಲೀ ಅಥವಾ ಕ್ವಿನಾಲ್‌ಫಾಸ್ 2ಮೀ.ಲೀ. ಪ್ರತಿ ಲೀಟರ ನೀರಿಗೆ ಸೇರಿಸಿ ಸಿಂಪರಣೆ

ಅಜವಾನ ಬೇಸಾಯ ಕ್ರಮಗಳು

ಭಾರತದಲ್ಲಿ ಅಜವಾನನ ಉತ್ಪಾದನೆಯು ಮುಖ್ಯವಾಗಿ ರಾಜಸ್ಥಾನ, ಗುಜರಾತ್, ಆಂಧ್ರಪ್ರದೇಶ, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಕೇಂದ್ರೀಕೃತವಾಗಿದೆ. 2020-21ರಲ್ಲಿ, 28,997 ಹೆಕ್ಟೇರ್ ಪ್ರದೇಶದಿಂದ 21,841 ಟನ್‌ಗಳಷ್ಟು ಅಜವೈನ್ ಕಾಳುಗಳನ್ನು ಭಾರತದಲ್ಲಿ ಉತ್ಪಾದಿಸಲಾಗಿದೆ. ಅಜವೈನ್‌ನ ಪ್ರಸ್ತುತಉತ್ಪಾದಕತೆ 753 ಕೆಜಿ/ಹೆ. ನಷ್ಟಿದೆ. ಇದು ಒಂದು ಬರ ನಿರೋಧಕ ಬೆಳೆ.

ಪ್ರಮುಖ ಪ್ರಭೇದಗಳು : ಅಜ್ಮೀರ್ ಅಜವಾನ-1 (ಎಎ-1), ಅಜ್ಮೀರ್ ಅಜವಾನ- 2 (ಎಎ-2), ಪ್ರತಾಪ್ ಅಜವಾನ-1, ಗುಜರಾತ್ ಅಜವಾನ-1, ಲ್ಯಾಮ್ ಆಯ್ಕೆ-1, ಲ್ಯಾಮ್‌ಆಯ್ಕೆ -2, ಆರ್.ಎ. 1-80 ಮತ್ತು ಆರ್.ಎ. 19-80

ಹವಾಮಾನ ಮತ್ತು ಮಣ್ಣು: : ಭಾರತದಲ್ಲಿ ಚಳಿಗಾಲದಲ್ಲಿ ಬೆಳೆಯಲಾಗುತ್ತದೆ. ಮಧ್ಯಮ ತಂಪಾದ ಮತ್ತು ಶುಷ್ಕ ವಾತಾವರಣವು ಸಸ್ಯ ಬೆಳವಣಿಗೆಗೆ ಮತ್ತು ಹೂಬಿಡುವಿಕೆಗೆ ಅನುಕೂಲಕರವಾಗಿದೆ. ಬೆಳೆಯು ಮಧ್ಯಮ ಮಟ್ಟದ ಬರ ಸಹಿಷ್ಣುತೆಯನ್ನು ಹೊಂದಿದೆ. ಚೆನ್ನಾಗಿ ನೀರು ಬಸಿದು ಹೋಗುವ ಕೆಂಪು ಮತ್ತು ಕಪ್ಪು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ತಟಸ್ಥ ರಸಸಾರ ಹೊಂದಿರುವ ಮಣ್ಣಿನಲ್ಲಿ ಉತ್ತಮ ಗುಣಮಟ್ಟದ ಎಲೆಗಳೊಂದಿಗೆ ಹೆಚ್ಚಿನ ಬೀಜದ ಇಳುವರಿಯನ್ನು ನೀಡುತ್ತದೆ.

ಭೂಮಿಯನ್ನು ಸಿದ್ಧಪಡಿಸುವುದು: ಉತ್ತಮ ಮೊಳಕೆಯೊಡೆಯಲು ಮತ್ತು ಸಸ್ಯದ ಬೆಳವಣಿಗೆಗೆ ಮಣ್ಣನ್ನು ಉತ್ತಮವಾಗಿ ಹದ ಮಾಡಬೇಕು. ಮೊದಲ ಉಳುಮೆಯನ್ನು ನೇಗಿಲಿನಿಂದ ಮಾಡಬೇಕು ನಂತರ 2-3 ಲಘು ಉಳುಮೆಯನ್ನು ಮಾಡಬೇಕು.

ಬಿತ್ತನೆ ಸಮಯ ಮತ್ತು ಬೀಜದ ಪ್ರಮಾಣ: ಸಾಮಾನ್ಯವಾಗಿ ಅಗಸ್ಟ್ ಎರಡನೇ ವಾರದಲ್ಲಿ ಬಿತ್ತನೆ ಮಾಡಬೇಕು. ಡಿಸೆಂಬರ್ ಅಥವಾ ಜನವರಿ ತಿಂಗಳನಲ್ಲಿ ಕೊಯ್ಲು ಮಾಡಲಾಗುತ್ತದೆ. ಒಂದು ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಲು, ಹಿಂಗಾರು ಹಂಗಾಮಿನ ಬೆಳೆಗೆ ಸುಮಾರು 1 ರಿಂದ 1.2 ಕೆಜಿ ಬೀಜಗಳು ಬೇಕಾಗುತ್ತವೆ.

ಬಿತ್ತನೆ ವಿಧಾನ: ಮಳೆಯಾಧಾರಿತ ವ್ಯವಸ್ಥೆಯಲ್ಲಿ 30 ಸೆಂ.ಮೀ ಅಂತರದ ಸಾಲುಗಳಲ್ಲಿ ಬಿತ್ತಲಾಗುತ್ತದೆ. ಬೀಜಗಳು 10-12 ದಿನಗಳಲ್ಲಿ ಮೊಳಕೆಯೊಡೆಯುತ್ತವೆ. ಗಿಡದಿಂದ ಗಿಡಕ್ಕೆ 20-30 ಸೆಂ.ಮೀ. ಅಂತರವಿರಬೇಕು. ಬೀಜದ ಗಾತ್ರವು ಸಣ್ಣದಾಗಿರುವುದರಿಂದ ಉತ್ತಮ ಮೊಳಕೆಯೊಡೆಯಲು ಸುಮಾರು 1.0 ರಿಂದ 1.5 ಸೆಂ.ಮೀ. ಆಳದಲ್ಲಿ ಬಿತ್ತನೆ ಮಾಡಬೇಕು. ಬಿತ್ತನೆ ಮಾಡುವ ಮೊದಲು ಬೀಜವನ್ನು ಒಣ ಮರಳನೊಂದಿಗೆ ಬೆರೆಸುವ ಮೂಲಕ ಬೀಜದ ಏಕರೂಪದ ಹರಡುವಿಕೆಯನ್ನು ನಿರ್ವಹಿಸಲಾಗುತ್ತದೆ.

ನೀರಾವರಿ ಮತ್ತು ಪೋಷಕಾಂಶಗಳ ನಿರ್ವಹಣೆ: ಗದಗ ಜಿಲ್ಲೆಯಲ್ಲಿ ಅಜವಾನವನ್ನು ಮಳೆಯಾಶ್ರಿತ ಬೆಳೆಯಾಗಿ ಬೆಳೆಯಲಾಗುತ್ತದೆ. ಬಿತ್ತನೆಯ ಸಮಯದಲ್ಲಿ ಆರಂಭಿಕ ತೇವಾಂಶ ಕಡಿಮೆಯಿದ್ದರೆ, ಮೊಳಕೆಯೊಡೆಯಲು ಅನುಕೂಲವಾಗುವಂತೆ ಬಿತ್ತನೆ ಮಾಡಿದ 4-5 ದಿನಗಳ ನಂತರ ಲಘು ನೀರಾವರಿ ನೀಡಬೇಕಾಗುತ್ತದೆ.

ಜಮೀನಿನ ಮಣ್ಣಿನ ಪರೀಕ್ಷೆಯ ವರದಿಯ ಆಧಾರದ ಮೇಲೆ ಗೊಬ್ಬರ ಮತ್ತು ರಸಗೊಬ್ಬರಗಳನ್ನು ನೀಡಬೇಕು. 4 ಟನ್ ಚೆನ್ನಾಗಿ ಕಳೆತ ಕೊಟ್ಟಿಗೆ ಗೊಬ್ಬರವನ್ನು ಉಳುಮೆ ಮಾಡುವ ಮೊದಲು ಹಾಕಿ ಮಣ್ಣಿನಲ್ಲಿ ಮಿಶ್ರಣ ಮಾಡಬೇಕು. ಕೊನೆಯ ಉಳುಮೆಯ ಸಮಯದಲ್ಲಿ ಪ್ರತಿ ಎಕರೆಗೆ 16 ಕೆಜಿ ಸಾರಜನಕ 20 ಕೆಜಿ ರಂಜಕ ಮತ್ತು 20 ಕೆಜಿ ಪೊಟ್ಯಾಷ ಗೊಬ್ಬರಗಳನ್ನು ಮಣ್ಣಿನಲ್ಲಿ ಚನ್ನಾಗಿ ಬೇರಸಬೇಕು. 16 ಕೆಜಿ ಸಾರಜನಕವನ್ನು ಹೆಚ್ಚುವರಿಯಾಗಿ ಎರಡು ಸಮಾನ ಭಾಗಗಳಲ್ಲಿ ಬಿತ್ತಿದ 45 ದಿನಗಳ ನಂತರ ಮತ್ತು ಎರಡನೆಯದಾಗಿ ಹೂಬಿಡುವ ಮೊದಲು ನೀಡಬೇಕು.

ಅಶ್ವಗಂಧ ಬೇಸಾಯ ಕ್ರಮಗಳು

ಅಶ್ವಗಂಧ ಒಂದು ಪ್ರಮುಖವಾದ ಔಷಧಿ ಬೆಳೆ. ಇದನ್ನು ಸ್ಥಳೀಯವಾಗಿ ಹಿರೆಮದ್ದಿನ ಸೊಪ್ಪು ಎಂದು ಕರೆಯುತ್ತಾರೆ. ಈ ಬೆಳೆಯನ್ನು ವಿವಿಧ ರೀತಿಯ ಕಾಯಿಲೆಗಳನ್ನು ಗುಣಪಡಿಸಲು ಆಯುರ್ವೇದ ಔಷಧಿಯನ್ನಾಗಿ ಉಪಯೋಗಿಸುತ್ತಾರೆ. ಈ ಬೆಳೆಯನ್ನು ಹೆಚ್ಚಾಗಿ ಆಳವಾದ ಕಪ್ಪು ಮಣ್ಣಿನಲ್ಲಿ ಬೆಳೆಯಲಾಗುತ್ತಿದೆ. ಇದು ಬರ ನಿರೋಧಕ ಬೆಳೆ. ಸ್ವಲ್ಪ ಪ್ರಮಾಣದ ಬಿದ್ದ ಮಳೆಯಿಂದ ಉತ್ತಮ ಉತ್ಪಾದನೆ ಹಾಗೂ ಆದಾಯವನ್ನು ಪಡೆಯಬಹುದು. ಈ ಬೆಳೆಯ ವಿವಿಧ ಭಾಗಗಳಾದ ಬೇರು, ಕಾಂಡ ಹಾಗೂ ಎಲೆಗಳನ್ನು ಔಷಧಿಯನ್ನಾಗಿ ಉಪಯೋಗಿಸುತ್ತಾರೆ. ಈ ಬೆಳೆಯನ್ನು ವಿವಿಧ ಔಷಧಿ ತಯಾರಿಸುವ ಉದ್ಯಮಗಳು ಖರೀದಿ ಮಾಡುತ್ತವೆ.

ಅಶ್ವಗಂಧವು ಹಿಂಗಾರಿ ಬೆಳೆಯಾಗಿದ್ದು, ಸಪ್ಟೆಂಬರ ತಿಂಗಳು ಬಿತ್ತಲು ಸೂಕ್ತ ಸಮಯವಾಗಿದೆ. ಪ್ರತಿ ಎಕರೆಗೆ ಬೀಜದ ಪ್ರಮಾಣ 4 ಕಿಲೋವಿದ್ದು ಯಾವುದೇ ರಾಸಾಯನಿಕ ಗೊಬ್ಬರಗಳು ಬೇಕಾಗಿರುವುದಿಲ್ಲ. ಇದರ ಜೊತೆಯಾಗಿ ಅಂತರ ಬೆಳೆಯಾಗಿ ದ್ವಿದಳ ಧಾನ್ಯವಾದ ಹುರಳ ಬೆಳೆಯನ್ನು ಬೆಳೆಯುವುದರಿಂದ ಸಾರಜನಕವನ್ನು ಅಶ್ವಗಂಧ ಬೆಳೆಗೆ ಒದಗಿದಂತಾಗುತ್ತದೆ ಹಾಗೂ ಹುರುಳ ಉತ್ಪನ್ನದಿಂದ ಆದಾಯವನ್ನು ಪಡೆಯಬಹುದು.

ಪೌಷ್ಠಿಕ ತೋಟ

"ಊಟ ಬಲ್ಲವನಿಗೆ ರೋಗವಿಲ್ಲ" ಎಂಬ ಜನಪ್ರಿಯ ಗಾದೆ ಎಲ್ಲರಿಗೂ ಗೊತ್ತಿದೆ. ಆಹಾರ ಸೇವನೆಯ ಮುಖ್ಯ ಉದ್ದೇಶ ಬರೀ ಹಸಿವೆಯನ್ನು ಹಿಂಗಿಸಿಕೊಳ್ಳುವುದಷ್ಟೇ ಅಲ್ಲ ದೇಹದ ಎಲ್ಲ ಭಾಗಗಳು ತಮ್ಮ ದೈನಂದಿನ ಕಾರ್ಯವನ್ನು ನಿರ್ವಹಿಸಲು ಬೇಕಾದ ಶಕ್ತಿ ದೊರೆಯಲು ಆಹಾರವನ್ನು ಸೇವಿಸಬೇಕಾಗುತ್ತದೆ. ಪ್ರತಿದಿನವು ನಾವು ಸೇವಿಸುವ ಆಹಾರವು ದೇಹದ ಬೆಳವಣಿಗೆ, ಪೋಷಣೆ ಮತ್ತು ದೇಹಕ್ಕೆ ಬೇಕಾಗುವ ಎಲ್ಲ ಪೋಷಕಾಂಶಗಳನ್ನು ನೀಡುವಂತಿದ್ದರೆ ಅದಕ್ಕೆ ಸಮತೋಲನ ಆಹಾರ ಎನ್ನುವರು.

ದಿನ ನಿತ್ಯ ಮನುಷ್ಯನು ತನ್ನ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಆರೋಗ್ಯವಂತನಾಗಿರಲು ವಿವಿಧ ಪೋಷಕಾಂಶಗಳು ಅತೀ ಮುಖ್ಯ. ದೇಹದ ಸ್ಥಿತಿಗೆ ತಕ್ಕ ಆಹಾರ ದೊರಕದಿದ್ದಲ್ಲಿ ನ್ಯೂನ್ಯ ಪೋಷಣೆಗೆ ಒಳಗಾಗಬೇಕಾಗುತ್ತದೆ. ಅಂದರೆ ಆಹಾರದಲ್ಲಿಯ ಪೋಷಕಾಂಶಗಳಾದ ಸಸಾರಜನಕ, ಮೇದಸ್ಸು, ಶರ್ಕರಪಿಷ್ಠ, ಜೀವಸತ್ವಗಳು, ಖನಿಜ ಲವಣಗಳು ಸರಿಯಾದ ಪ್ರಮಾಣದಲ್ಲಿ ದೊರೆಯದಿದ್ದರೆ ಅಪೌಷ್ಠಿಕತೆ ಉಂಟಾಗುವುದು.

ದಿನ ನಿತ್ಯ ಊಟದಲ್ಲಿ ಸಮತೋಲನ ಆಹಾರ ಪದ್ಧತಿಯನ್ನು ಅನುಸರಿಸುವುದು ಬಹಳ ಮುಖ್ಯ. ಸಮತೋಲನ ಆಹಾರ ಸೇವಿಸುತ್ತಿದ್ದರೂ ಕೂಡ ಹಲವಾರು ಆರೋಗ್ಯ ಸಮಸ್ಯೆಗಳನ್ನು ನಾವು ಎದುರಿಸುತ್ತಿದ್ದೇವೆ. ಇದಕ್ಕೆ ಕಾರಣ ಕಲುಷಿತ ಆಹಾರ ಅಥವಾ ರಾಸಾಯನಿಕಯುಕ್ತವಾದ ಹಣ್ಣು ಮತ್ತು ತರಕಾರಿಗಳ ಬಳಕೆ ಹಾಗೂ ದೈಹಿಕ ವ್ಯಾಯಾಮ ಇಲ್ಲದಿರುವುದು. ಅಧಿಕ ಇಳುವರಿ ಹಾಗೂ ಹೆಚ್ಚು ಲಾಭವನ್ನು ಪಡೆಯುವ ಉದ್ದೇಶದಿಂದ ಹಣ್ಣು ಮತ್ತು ತರಕಾರಿ ಬೆಳೆಯಲು ಸಾಕಷ್ಟು ರಾಸಾಯನಿಕ ಹಾಗೂ ಕೀಟ ನಾಶಕಗಳನ್ನು ಬಳಸಲಾಗುತ್ತಿದೆ. ಇದರಿಂದ ಹಣ್ಣು ಮತ್ತು ತರಕಾರಿಗಳಲ್ಲಿ ಇವುಗಳ ಅಂಶವು ಉಳಿದು, ಅದನ್ನು ಸೇವಿಸುವದರಿಂದ ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವದಲ್ಲದೇ ಅನೇಕ ರೋಗಗಳು ಬರುತ್ತವೆ. ಆದರೆ ಹಣ್ಣು ಮತ್ತು ತರಕಾರಿಗಳ ಸೇವನೆ ಅತ್ಯವಶ್ಯ. ಏಕೆಂದರೆ ದೇಹಕ್ಕೆ ಬೇಕಾದ ಜೀವಸತ್ವಗಳು ಹಾಗೂ ಖನಿಜ ಲವಣಗಳು, ಹಣ್ಣು ಮತ್ತು ತರಕಾರಿಗಳಿಂದ ಒದಗುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಅವಶ್ಯವಿರುವಷ್ಟು ಹಣ್ಣು ಮತ್ತು ತರಕಾರಿಗಳನ್ನು ಬಳಸಲು ಸಾಧ್ಯವಾಗುತ್ತಿಲ್ಲ, ಯಾಕೆಂದರೆ ಅವುಗಳ ಬೆಲೆ ಗಗನಕ್ಕೇರುತ್ತಿರುವದು. ಇದರಿಂದ ನ್ಯೂನ್ಯ ಪೋಷಣೆಯನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಪರಿಹಾರವಾಗಿ ಹಿತ್ತಲದ ಸ್ಥಳ ಅಥವಾ ಮನೆಯ ಮೇಲ್ಚಾವಣಿ (ತಾರಸಿ) ತೋಟ ಮಾಡುವದರಿಂದ ಕುಟುಂಬಕ್ಕೆ ಅವಶ್ಯವಿರುವಷ್ಟು ರಾಸಾಯನಿಕ ಮುಕ್ತ ತಾಜಾ ತರಕಾರಿಗಳನ್ನು ಪಡೆಯಲು ಸಾಧ್ಯ. ಮನೆಯಲ್ಲಿರುವ ತಾಜ್ಯ ವಸ್ತುಗಳಾದ ಪ್ಲಾಸ್ಟಿಕ್ ಚೀಲ, ಗೊಬ್ಬರದ ಚೀಲ, ಸಿಮೆಂಟ್ ಚೀಲ, ಪ್ಲಾಸ್ಟಿಕ್ ಹಾಳೆ, ಬುಟ್ಟಿ ಹಾಗೂ ಇನ್ನಿತರ ಸಾಮಗ್ರಿಗಳನ್ನು ಉಪಯೋಗಿಸಿ ಕುಟುಂಬಕ್ಕೆ ಬೇಕಾದ ತರಕಾರಿಗಳನ್ನು ಬೆಳೆಯಬಹುದು. ಅಡುಗೆ ಮನೆಯ ತ್ಯಾಜ್ಯ ವಸ್ತುಗಳನ್ನು ಉಪಯೋಗಿಸಿ ಎರೆ ಗೊಬ್ಬರ ತಯಾರಿಸಿ ಕೈ ತೋಟ ಅಥವಾ ತಾರಸಿ ತೋಟಕ್ಕೆ ಬಳಸಬಹುದು.

<u>ಆಹಾರದಲ್ಲಿ ಹಣ್ಣು ಮತ್ತು ತರಕಾರಿಗಳ ಮಹತ್ವ</u>

1) ಹಣ್ಣು ಮತ್ತು ತರಕಾರಿಗಳನ್ನು ಸೇವಿಸುವುದರಿಂದ ಜೀವಸತ್ವಗಳು ಹಾಗೂ ಖನಿಜ ಲವಣಗಳು ದೊರೆಯುತ್ತವೆ.

2)ಹಣ್ಣು ಮತ್ತು ತರಕಾರಿಗಳು ಆರೋಗ್ಯದಾಯಕ, ಸೌಂದರ್ಯವರ್ಧಕ, ರುಚಿ, ಸ್ವಾದ ಮತ್ತು ಜೀರ್ಣಶಕ್ತಿ ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ.

3) ಕೆಲವೊಂದು ಮೂಲ ರೋಗಗಳಿಗೆ ಧನ್ವಂತರಿಯಂತೆ ಔಷಧಿ ಗುಣಗಳನ್ನು ಹೊಂದಿದ ಸೊಪ್ಪುಗಳನ್ನು ಸೇವಿಸುವುದರಿಂದ ಆಹಾರದಲ್ಲಿಯ ಪ್ರೋಟಿನ ಮತ್ತು ಕೊಬ್ಬುಗಳನ್ನು ಹಾಗೂ ಜೀರ್ಣ ಶಕ್ತಿಯಲ್ಲಿ ಉತ್ಪನ್ನಗೊಳ್ಳುವ ಆಮ್ಲಗಳನ್ನು ಸಮತೋಲನಗೊಳಿಸುವುದರಿಂದ ಮನುಷ್ಯನ ಶಕ್ತಿ ಹಾಗೂ ಬೆಳವಣಿಗೆಗೆ ಸೊಪ್ಪಿನ ತರಕಾರಿಗಳು ನೆರವಾಗುತ್ತವೆ.

4) ಹಣ್ಣು, ತರಕಾರಿ ಹಾಗೂ ಸೊಪ್ಪಿನ ಪಲ್ಲೆಗಳನ್ನು ಸೇವಿಸುವದರಿಂದ ರಕ್ತ ಹೀನತೆ ಮತ್ತು ಇರುಳುಗಣ್ಣು ಸಮಸ್ಯೆ ನೀಗುತ್ತದೆ. ಇದಲ್ಲದೆ ಇವುಗಳ ಸೇವನೆ ಮೂಳೆ ಮತ್ತು ಹಲ್ಲುಗಳ ಆರೋಗ್ಯಕ್ಕೆ ಬಹಳ ಮುಖ್ಯ.

ಒಟ್ಟಾರೆಯಾಗಿ ಪೌಷ್ಠಿಕ ತೋಟ ಅಥವಾ ತಾರಸಿ ತೋಟ ಮಾಡುವುದರಿಂದ ರಾಸಾಯನಿಕ ಮುಕ್ತ ತರಕಾರಿ, ಮನೆಯ ಸುತ್ತ ನೈರ್ಮಲ್ಯತೆ, ಹಣ ಉಳಿತಾಯ ಹಾಗೂ ದೇಹಕ್ಕೆ ವ್ಯಾಯಾಮ ಮತ್ತು ಮಾನಸಿಕ ತೃಪ್ತಿ ಸಿಗುವುದು.

<u>ಕಡಿಮೆ ಮಳೆಯಲ್ಲಿ ನವಣೆ ಬೆಳೆ ಲಾಭದಾಯಕ</u>

ನವಣೆ ಒಂದು ಮುಖ್ಯವಾದ ಕಿರುಧಾನ್ಯ ಬೆಳೆಯಾಗಿದ್ದು ಇದನ್ನು ಗದಗ ಜಿಲ್ಲೆಯಲ್ಲಿ ಅಲ್ಲಲ್ಲಿ ರೈತರು ಕಡಿಮೆ ಕ್ಷೇತ್ರದಲ್ಲಿ ಬೆಳೆಯುತ್ತಾರೆ. ನವಣೆ ಬೆಳೆ ಅಲ್ಪಾವಧಿ ಬೆಳೆಯಾಗಿದ್ದು ಸುಮಾರು ೮೫-೯೦ ದಿನಗಳಲ್ಲಿ ಕಟಾವಿಗೆ ಬರುತ್ತದೆ. ಬರಗಾಲದ ಬೆಳೆ ಎಂದೇ ಪ್ರಸಿದ್ಧಿಯಾದ ನವಣೆ ಹವಾಗುಣ ವೈಪರೀತ್ಯಗಳಿಗೆ ಹೊಂದಿಕೊಳ್ಳಬಲ್ಲದು. ಕಡಿಮೆ ಫಲವತ್ತತೆ, ಕಡಿಮೆ ಆಳದ ನೆಲ, ಕಡಿಮೆ ಮಳೆ ಹಾಗೂ ಎಲ್ಲಾ ತರಹದ

ಭೂಮಿಯಲ್ಲಿ ಬೆಳೆಯಬಹುದು. ನವಣೆಯಲ್ಲಿ ಸಸಾರಜನಕ ಪಿಷ್ಟ ಪದಾರ್ಥ ನಾರಿನಅಂಶ ಹಾಗೂ ಖನಿಜಾಂಶಗಳು ಹೆಚ್ಚಾಗಿ ಇರುವದರಿಂದ ಹಲವಾರು ರೋಗಗಳ ವಿರುದ್ಧ ರಕ್ಷಣೆ ನೀಡುವ ನವಣೆ ಪದಾರ್ಥಗಳನ್ನು ದಿನನಿತ್ಯ ನಾವು ನಮ್ಮ ಆಹಾರದಲ್ಲಿ ಬಳಸಬೇಕು.

ನವಣೆ ಬೆಳೆಯ ಉತ್ತಮ ಹಾಗೂ ಹೆಚ್ಚು ಇಳುವರಿ ಕೊಡುವ ಎಚ್. ಎಂ. ಟಿ 100-1 ಹಾಗೂ ಡಿ.ಎಚ್.ಎಫ್.ಟಿ 109-3 ತಳಗಳು 80-85 ದಿನಗಳಲ್ಲಿ ಕಟಾವಿಗೆ ಬರುತ್ತವೆ.

ಬಿತ್ತನೆ ಕಾಲ: ಜೂನ್ ತಿಂಗಳ ಎರಡನೇ ವಾರದಿಂದ ಜುಲೈ ತಿಂಗಳ ಕೊನೆಯ ವಾರದ ವರೆಗೂ ಬಿತ್ತನೆ ಮಾಡಬಹುದು ಬೇಗ ಬಿತ್ತುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು.

ಬೀಜದ ಪ್ರಮಾಣ: ಪ್ರತಿ ಎಕರೆಗೆ 2 ರಿಂದ 3 ಕಿಲೋ ಬೀಜ ಬೇಕು

ಬೀಜೋಪಚಾರ: ಪ್ರತಿ ಎಕರೆ ಬೀಜಕ್ಕೆ 250 ಗ್ರಾಂ ಅಜೋಸ್ಪಿರಿಲಂ ಜೈವಿಕ ಗೊಬ್ಬರದಿಂದ ಬೀಜೋಪಚಾರ ಮಾಡಿ ಬಿತ್ತಬೇಕು.

ರಾಸಾಯನಿಕ ಗೊಬ್ಬರ: ಬಿತ್ತುವಾಗ ಪ್ರತಿ ಎಕರೆಗೆ ಸುಮಾರು 35 ಕಿಲೋ 19:19:19 ಗೊಬ್ಬರವನ್ನು ಕೊಡಬೇಕು ನಂತರ ಬಿತ್ತನೆಯಾದ 30ದಿನಗಳಲ್ಲಿ 15 ಕಿಲೋ ಯುರಿಯಾ ಗೊಬ್ಬರವನ್ನು ಮೇಲು ಗೊಬ್ಬರವಾಗಿ ಕೊಡಬೇಕು.

ಅಂತರ ಬೇಸಾಯ: ಬಿತ್ತನೆಯ ಮೂರನೇ ವಾರದ ನಂತರ 15 ದಿನಗಳಿಗೊಮ್ಮೆ 2-3 ಬಾರಿ ಅಂತರ ಬೇಸಾಯ (ಎಡೆಕುಂಟೆ) ಮಾಡುವುದರಿಂದ ಬಿದ್ದ ಮಳೆ ನೀರು ಭೂಮಿಯಲ್ಲಿ ಇಂಗಲು ಸಹಾಯವಾಗುತ್ತದೆ ಹಾಗೂ ಕಳೆ ನಿಯಂತ್ರಣ ಕೂಡಾ ಆಗುತ್ತದೆ.

ಇಳುವರಿ: ಎಕರೆಗೆ 7 ರಿಂದ 8 ಕ್ವಿಂಟಲ್ ಕಾಳು ಹಾಗೂ 1.5 ರಿಂದ 2 ಟನ್ ಮೇವು ಪಡೆಯಬಹುದು

ಮಿಶ್ರ ಬೆಳೆ: ನವಣೆಯಲ್ಲಿ ತೊಗರಿ, ಹೆಸರು ಹಾಗೂ ಎಳ್ಳು ಬೆಳೆಗಳನ್ನು 4:2 ಪ್ರಮಾಣದಲ್ಲಿ ಮಿಶ್ರ ಬೆಳೆಯಾಗಿ ಬೆಳೆಯಬಹುದು ಹೆಚ್ಚು ಲಾಭದಾಯಕ.

ರೋಗ ಮುಕ್ತ ಜೀವನಕ್ಕೆ ಸಿರಿಧಾನ್ಯಗಳು

ಎಲ್ಲರಿಗೂ ಆರೋಗ್ಯ ಚೆನ್ನಾಗಿರಬೇಕೆಂಬ ಆಸೆ. ಉತ್ತಮ ಆರೋಗ್ಯ ಯಾರಿಗೆ ಬೇಡ? ರೋಗಮುಕ್ತ ಆರೋಗ್ಯ ಸಂಪತ್ತನ್ನು ಪಡೆಯಲು ಮನುಷ್ಯ ಹರಸಾಹಸ ಪಡುತ್ತಿರುವನು. ಬದಲಾಗುತ್ತಿರುವ ಜೀವನ ಶೈಲಿ ಹಾಗೂ ದಿನನಿತ್ಯದ ಆಹಾರ ಬಳಕೆ ನೋಡಿದಾಗ ನಮ್ಮ ಆರೋಗ್ಯದಲ್ಲಿ ಏನೋ ತೊಂದರೆಗಳು, ಪರಿಪೂರ್ಣತೆಯಿಲ್ಲದಿರುವುದು ಕಾಣುತ್ತಿದೆ. ಇದಕ್ಕೆ ಕಾರಣ ಹಸಿವೆ ಆದ ತಕ್ಷಣ ಏನಾದರೂ ತಿಂದು ಹಸಿವೆಯನ್ನು ನೀಗಿಸುವುದು ಇವತ್ತು ನಾವೆಲ್ಲರೂ ಮಾಡ್ತಾ ಇರೋದು. ಉತ್ತಮ ಆರೋಗ್ಯಕ್ಕೆ ಪೂರಕವಾದ ಆಹಾರ ಪದಾರ್ಥಗಳನ್ನು ಬಳಸುವದನ್ನು ಬಿಟ್ಟುಬಿಟ್ಟಿದ್ದೇವೆ ಎಂದರೆ ತಪ್ಪಾಗಲಿಕ್ಕಿಲ್ಲ. ಪರಂಪರಾಗತ ಆಹಾರ ಹಾಗೂ ಸಾಂಪ್ರದಾಯಕ ಆಹಾರಗಳು ಮರೆಯಾಗುತ್ತಲಿವೆ.

ಬರದ ನಾಡಿನಲ್ಲಿ ಕಡಿಮೆ ಮಳೆಯಾದಾಗಲೂ ಇಳುವರಿ ನೀಡುವ ಸಿರಿಧಾನ್ಯಗಳನ್ನು ನಾವು ಬೆಳೆಯುತ್ತಿಲ್ಲ. ಆದರೆ ಹಲವಾರು ಕಾಯಿಲೆಗಳು ಬರದಂತೆ ಮಾಡಲು ಹಾಗೂ ಬಂದ ನಂತರ ನಿಯಂತ್ರಿಸಲು ಸಿರಿಧಾನ್ಯಗಳನ್ನು ಇವತ್ತು ಆಹಾರದಲ್ಲಿ ಬಳಸಲೇಬೇಕಾಗಿದೆ. ಈ ಸಿರಿಧಾನ್ಯಗಳೆಂದರೆ ನವಣೆ, ಸಾಮೆ, ಹಾರಕ, ಬರಗು, ಊದಲು, ಕೊರಲೆ, ಸಜ್ಜೆ, ರಾಗಿ ಮತ್ತು ಜೋಳ. ಸಿರಿಧಾನ್ಯಗಳು ಮತ್ತು ಇತರ ಧಾನ್ಯಗಳಲ್ಲಿರುವ ಪೋಷಕಾಂಶಗಳ ಮೌಲ್ಯ ಈ ಕೆಳಗಿನಂತಿದೆ. ಇವುಗಳನ್ನು ಪರಿಶೀಲಿಸಿದಾಗ ನಮ್ಮಲ್ಲಿ ಬಹಳಷ್ಟು ಜನ ಉಪಯೋಗಿಸುತ್ತಿರುವ ಅಕ್ಕಿ-ಗೋಧಿಗಳಲ್ಲಿ ಎಷ್ಟು ಕಡಿಮೆ ನಾರಿನಾಂಶಗಳಿವೆ ಎಂದು ಮನದಟ್ಟಾಗುತ್ತದೆ. ನಾರಿನಾಂಶ ಹೆಚ್ಚಾಗಿರುವ ಆಹಾರ ಪದಾರ್ಥಗಳನ್ನು ಉಪಯೋಗಿಸುವುದೇ ಜಾಣತನ. ಇದರಿಂದ ಹಲವಾರು ರೋಗಗಳನ್ನು ದೂರವಿಡಲು ಸಾಧ್ಯವಿದೆ.

ವಿವಿಧ ಧಾನ್ಯಗಳಲ್ಲಿರುವ ಪೋಷಕಾಂಶಗಳ ಮೌಲ್ಯ

ಆಹಾರ ಧಾನ್ಯಗಳು (ಪ್ರತಿ 100 ಗ್ರಾಂ ಗೆ)	ಪ್ರೋಟೀನ್ (ಗ್ರಾಂ)	ಖನಿಜಾಂಶ (ಗ್ರಾಂ)	ನಾರಿನಾಂಶ (ಗ್ರಾಂ)	ಶರ್ಕರ ಪಿಷ್ಟ (ಗ್ರಾಂ)	ಕ್ಯಾಲ್ಸಿಯಂ (ಮಿ.ಗ್ರಾಂ)	ಕಬ್ಬಿಣ (ಮಿ.ಗ್ರಾಂ)
ನಕಾರಾತ್ಮಕ ಧಾನ್ಯಗಳು						
ಅಕ್ಕಿ	6.8	0.6	0.2	78.2	10	0.7
ಗೋಧಿ	11.8	1.5	1.2	71.2	41	5.3
ತಟಸ್ಥ ಧಾನ್ಯಗಳು						
ಜೋಳ	10.4	1.6	1.6	72.6	25	4.1
ಸಜ್ಜೆ	11.6	2.3	1.2	67.5	42	8.0
ಬರಗು	12.5	1.9	2.2	70.4	14	0.8
ರಾಗಿ	7.3	2.7	3.6	72.0	344	3.9
ಸಕಾರಾತ್ಮಕ ಧಾನ್ಯಗಳು						
ನವಣೆ	12.3	3.3	8.0	60.9	31	2.8
ಸಾಮೆ	7.7	1.5	7.6	67.0	17	9.3
ಊದಲು	6.2	4.4	9.8	65.5	20	5.0
ಹಾರಕ	8.3	2.6	9.0	65.9	27	0.5
ಕೊರಲೆ	11.5	4.2	12.5	69.7	10	0.6

ನಕಾರಾತ್ಮಕ ಧಾನ್ಯಗಳಾದ ಅಕ್ಕಿ ಹಾಗೂ ಗೋಧಿಗಳಲ್ಲಿ ನಾರಿನಾಂಶ ಕಡಿಮೆಯಿರುವುದಲ್ಲದೇ ಈ ಧಾನ್ಯಗಳು ಬೇಗನೇ ಅಂದರೆ 1-2 ಗಂಟೆಗಳಲ್ಲಿ ಜೀರ್ಣವಾಗಿ ರಕ್ತದಲ್ಲಿ ತ್ವರಿತವಾಗಿ ಸೇರ್ಪಡೆಯಾಗುವದರಿಂದ ಗ್ಲುಕೋಸ ಅಂದರೆ ಸಕ್ಕರೆ ಮಟ್ಟವನ್ನು ಶೀಘ್ರವಾಗಿ ಹೆಚ್ಚಿಗೆ ಮಾಡುತ್ತವೆ. ಆದ್ದರಿಂದ ಅಕ್ಕಿ ಹಾಗೂ ಗೋಧಿಯನ್ನು ನಕಾರಾತ್ಮಕ ಧಾನ್ಯಗಳೆಂದು ಕರೆಯುವರು.

ತಟಸ್ಥ ಧಾನ್ಯಗಳಾದ ಜೋಳ, ಸಜ್ಜೆ, ಬರಗು ಹಾಗೂ ರಾಗಿಗಳಲ್ಲಿ ನಾರಿನಾಂಶ ಮಧ್ಯಪ್ರಮಾಣದಲ್ಲಿದ್ದು, ಗ್ಲುಕೋಸ ಮಟ್ಟವನ್ನು ಹೆಚ್ಚು ಕಡಿಮೆಯಾಗದಂತೆ ನೋಡಿಕೊಳ್ಳುವುದರಿಂದ ತಟಸ್ಥ ಧಾನ್ಯಗಳೆಂದು ಕರೆಯುವರು.

ಸಕಾರಾತ್ಮಕ ಧಾನ್ಯಗಳಾದ ನವಣೆ, ಊದಲು, ಹಾರಕ ಹಾಗೂ ಕೊರಲೆಗಳನ್ನು ಶ್ರೇಷ್ಠ ಧಾನ್ಯಗಳೆಂದು ಕರೆಯುವರು. ಏಕೆಂದರೆ ಈ ಧಾನ್ಯಗಳು ಗ್ಲುಟೆನ್ ರಹಿತವಾಗಿದ್ದು ಮತ್ತು ನಾರಿನ ಅಂಶ ಹೆಚ್ಚಿರುವಂತಹ ಧಾನ್ಯಗಳು. ಈ ಧಾನ್ಯಗಳನ್ನು ಸೇವಿಸಿದಾಗ ಗ್ಲುಕೋಸ ಸಮತೋಲನವಾಗಿ 5-6 ಗಂಟೆಗಳ ಕಾಲ ನಿಧಾನವಾಗಿ ರಕ್ತಕ್ಕೆ ಸೇರುವದರಿಂದ ಉತ್ತಮ ಆರೋಗ್ಯವನ್ನು ಹೊಂದಲು ಸಾಧ್ಯ. ಇವುಗಳಿಂದ ದೇಹದಲ್ಲಿ ಸಕ್ಕರೆ ಪ್ರಮಾಣ ಹೆಚ್ಚಿಗೆ ಆಗುವುದಿಲ್ಲ. ಜೊತೆಗೆ ಖನಿಜಲವಣಗಳು ಈ ಧಾನ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇವೆ.

ಹಾಗಾದರೆ ಈ ಸಿರಿಧಾನ್ಯಗಳಲ್ಲಿ ಏನಿದೆ?

- ಸಿರಿಧಾನ್ಯಗಳಲ್ಲಿ ನಾರಿನಾಂಶ ಅತಿ ಹೆಚ್ಚಿನ ಪ್ರಮಾಣದಲ್ಲಿರುವದರಿಂದ ಆಹಾರವು ಸಾವಕಾಶವಾಗಿ ಜೀರ್ಣವಾಗುತ್ತದೆ. ಇದರಿಂದ ಈ ಧಾನ್ಯಗಳಲ್ಲಿರುವ ಗ್ಲುಕೋಸ್ ಸಮತೋಲನವಾಗಿ ಹಾಗೂ ಸಾವಕಾಶವಾಗಿ ರಕ್ತಕ್ಕೆ ಸೇರುವುದರಿಂದ ಸಕ್ಕರೆ ಕಾಯಿಲೆ ರೋಗ ಹಾಗೂ ಹೃದಯ ಸಂಬಂಧಿತ ರೋಗಗಳನ್ನು ತಡೆಗಟ್ಟುವುದು ಹಾಗೂ ನಿಯಂತ್ರಣದಲ್ಲಿಡಲು ಸಾಧ್ಯವಾಗುವುದು.
- ಸಿರಿಧಾನ್ಯಗಳಲ್ಲಿ ನಾರಿನಾಂಶ ಹೆಚ್ಚಿರುವುದರಿಂದ ಮಲಬದ್ಧತೆ, ಪೈಲ್ಸ, ಆ್ಯಸಿಡಿಟಿ, ಅಲ್ಸರ್, ಕರುಳಿನ ಕ್ಯಾನ್ಸರ, ಅಜೀರ್ಣತೆ, ಬೊಜ್ಜು ಉಂಟಾಗುವುದಿಲ್ಲ.
- ಸಿರಿಧಾನ್ಯಗಳು ಗ್ಲುಟೆನ್ ರಹಿತವಾಗಿರುವುದರಿಂದ ಜೀರ್ಣಾಂಗದ ಮೇಲೆ ಹಾಗೂ ಪೌಷ್ಟಿಕಾಂಶಗಳನ್ನು ಹೀರಿಕೊಳ್ಳುವಲ್ಲಿ ಯಾವುದೇ ದುಷ್ಪರಿಣಾಮವನ್ನು ಬೀರುವುದಿಲ್ಲ,

- ಪ್ರೋಟೀನ್, ಖನಿಜ ಲವಣಗಳು ಮತ್ತು 'ಬಿ' ಗುಂಪಿನ ಜೀವಸತ್ವಗಳು ಸಿರಿಧಾನ್ಯಗಳಲ್ಲಿ ಹೇರಳವಾಗಿವೆ. ಇದರಿಂದ ದೇಹದ ಎಲುಬುಗಳನ್ನು ಗಟ್ಟಿಗೊಳಿಸಲು ಹಾಗೂ ನರಗಳನ್ನು ಪುನಶ್ಚೇತನಗೊಳಿಸಲು ಸಾಧ್ಯವಾಗುವುದು.
- ನಾರಿನಾಂಶವಿರುವ ಸಿರಿಧಾನ್ಯಗಳ ಸೇವನೆಯಿಂದ ಕೊಲೆಸ್ಟ್ರಾಲ್ ಅಂಶ ಕಡಿಮೆಯಾಗುವುದಲ್ಲದೇ, ಕೆಟ್ಟ ಕೊಲೆಸ್ಟ್ರಾಲ್ ಆದ ಎಲ್.ಡಿ.ಎಲ್ (ಲೋ ಡೆನ್ಸಿಟಿ ಲೈಪೊಪ್ರೋಟೀನ್) ಕೊಲೆಸ್ಟ್ರಾಲನ್ನು ಹೊರ ಹಾಕುತ್ತದೆ ಹಾಗೂ ಒಳ್ಳೆಯ ಕೊಲೆಸ್ಟ್ರಾಲನ್ನು ಹೆಚ್ಚಿಸುತ್ತದೆ.
- ಸಿರಿಧಾನ್ಯಗಳಲ್ಲಿರುವ ಸೆರಟೋನಿನ್ ಎಂಬ ಅಂಶವು ನಮ್ಮ ಮನಸ್ಸನ್ನು ಶಾಂತವಾಗಿಡುತ್ತದೆ. ಸಿರಿಧಾನ್ಯಗಳಲ್ಲಿ ಬೀಟಾ ಕೆರೋಟಿನ್ ಪ್ರಮಾಣ ಹೆಚ್ಚಿನ ಪ್ರಮಾಣದಲ್ಲಿದ್ದು ಕಣ್ಣುಗಳ ಆರೋಗ್ಯ, ಪ್ರತಿರೋಧಕ ಶಕ್ತಿ, ಆರೋಗ್ಯಯುತ ಚರ್ಮ ಹೊಂದಲು ಸಾಧ್ಯವಾಗುತ್ತದೆ.
- ಸಿರಿಧಾನ್ಯಗಳು ಅಲಕಲೈನ್ ಆಗಿರುವದರಿಂದ, ಸೇವಿಸಿದಾಗ ಆ್ಯಸಿಡಿಟಿ ಉಂಟಾಗುವುದಿಲ್ಲ.

ಆಹಾರದಲ್ಲಿ ಸಿರಿಧಾನ್ಯಗಳ ಬಳಕೆ: ದಿನ ನಿತ್ಯ ಆಹಾರದಲ್ಲಿ ಸಿರಿಧಾನ್ಯಗಳನ್ನು ಉಪಯೋಗಿಸಿ ಅನೇಕ ಪದಾರ್ಥಗಳನ್ನು ಮಾಡಿ ಬಳಸಬಹುದು. ಮುಖ್ಯವಾಗಿ ಉಪ್ಪಿಟ್ಟು, ರೊಟ್ಟಿ, ಇಡ್ಲಿ, ಪಲಾವ, ದೋಸೆ ಪೊಂಗಲ್, ಚಕ್ಕಲಿ, ಮೊಸರನ್ನ ಹೀಗೆ ಪ್ರತಿಯೊಂದು ಸಿರಿಧಾನ್ಯದಿಂದ ದಿನನಿತ್ಯ ತರತರಹದ ಅಡುಗೆಗಳನ್ನು ಮಾಡಿ ಬಳಸಬಹುದು.

ಹತ್ತು ಹಲವಾರು ಔಷಧೀಯ ಗುಣಗಳನ್ನು ಹೊಂದಿರುವ ಹಾಗೂ ರಾಸಾಯನಿಕ ಮುಕ್ತವಾದ ಸಿರಿಧಾನ್ಯಗಳ ಬಳಕೆ ಬಹಳ ಮುಖ್ಯವಾದುದು. ಸದೃಡ ಆರೋಗ್ಯ ಹೊಂದಿ ರೋಗ ಮುಕ್ತ ಜೀವನ ನಡೆಸಲು ಸಿರಿಧಾನ್ಯಗಳ ಬಳಕೆ ಅತ್ಯವಶ್ಯಕವಾಗಿದೆ.

ಮಳೆ ಕೊರತೆ ನೀಗಿಸಲು ಅನುಸರಿಸಬೇಕಾದ ಕೃಷಿ ತಾಂತ್ರಿಕತೆಗಳು

1) **ಚೌಕು ಮಡಿಗಳ ಹಾಗೂ ದಿಂಡು ಸಾಲುಗಳ ನಿರ್ಮಾಣ** : ಇದುವರೆಗೂ ಬಿತ್ತದೇ ಇರುವ ಹೊಲಗಳಲ್ಲಿ ಬಿದ್ದ ಮಳೆ ನೀರನ್ನು ಭೂಮಿಯಲ್ಲಿ ಇಂಗಿಸಿಕೊಳ್ಳಲು ಚೌಕು ಮಡಿಗಳು ಅಥವಾ ದಿಂಡು ಸಾಲುಗಳ ನಿರ್ಮಾಣ ಮಾಡಬೇಕು. ಚೌಕು ಮಡಿ ಮಾಡುವಾಗ ಜಮೀನಿನ ಇಳಿಜಾರಿಗೆ ಅನುಗುಣವಾಗಿ 15 ಅಥವಾ 20 ಅಡಿ ಉದ್ದಗಲಗಳ ಚೌಕು ಮಡಿಗಳನ್ನು ಬಂಡ್ ಫಾರ್ಮರ್ ಅಥವಾ ಎಡೆ ಕುಂಟೆ ಉಪಯೋಗಿಸಿ ಮಾಡಬೇಕು. ಇಲ್ಲವೇ ಜಮೀನಿನ ಇಳಿಜಾರಿಗೆ ಅಡ್ಡಲಾಗಿ ನೇಗಿಲ ಉಪಯೋಗಿಸಿಕೊಂಡು ದಿಂಡು ಸಾಲುಗಳನ್ನು ರಚಿಸಬೇಕು. ಉತ್ತಮ ಮಳೆ ಆದಾಗ ಚೌಕು ಮಡಿ ಅಥವಾ ದಿಂಡು ಸಾಲುಗಳಲ್ಲಿ ಸಂಗ್ರಹಗೊಂಡು ಭೂಮಿಯಲ್ಲಿ ಇಂಗಿದ ನೀರು ಹಿಂಗಾರು ಬೆಳೆಗಳಿಗೆ ಬಹುಕಾಲದವರೆಗೆ ಸಿಗುತ್ತದೆ. ಇದರಿಂದ ಕಡಿಮೆ ಮಳೆ ಪರಿಸ್ಥಿತಿಯಲ್ಲಿಯೂ ಕೂಡ ಉತ್ತಮ ಬೆಳೆ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಚೌಕು ಮಡಿಗಳು



ಅಡತಡೆಗಳುಳ್ಳ ದಿಂಡು

2) **ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ ನೆನೆಸಿ ಬಿತ್ತನೆ** : ಒಣಬೇಸಾಯದಲ್ಲಿ ಬಿತ್ತುವ ಬೆಳೆಗಳಲ್ಲಿ ಬರ ನಿರೋಧಕ ಶಕ್ತಿ ಬರಲು ಬಿತ್ತನೆ ಬೀಜಗಳನ್ನು ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ ನೆನೆಸಿ ಬಿತ್ತನೆ ಮಾಡಬೇಕು. 20 ಗ್ರಾಂ ಕ್ಯಾಲ್ಸಿಯಂ ಕ್ಲೋರೈಡ್ ಪುಡಿಯನ್ನು 1 ಲೀಟರ್ ನೀರಿನಲ್ಲಿ ಹಾಕಿ ಕರಗಿಸಬೇಕು. ನಂತರ ಈ ದ್ರಾವಣದಲ್ಲಿ 1 ಕಿಲೋ ದ್ವಿದಳ ಧಾನ್ಯಗಳಾದ ತೊಗರಿ, ಮಡಕಿ ಬೀಜಗಳನ್ನು ಸುಮಾರು ಒಂದು ಘಂಟೆ ಕಾಲ ನೆನೆಸಿ ಹಾಗೂ ಸೂರ್ಯಕಾಂತಿ ಬೀಜವನ್ನು 4-5 ಗಂಟೆಗಳ ಕಾಲ ನೆನೆಸಿ ನಂತರ ನೆರಳಲ್ಲಿ 4-5 ಗಂಟೆಗಳ ಕಾಲ ಒಣಗಿಸಿ ಬಿತ್ತನೆ ಮಾಡಬೇಕು. ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ ನೆನೆಸಿ ಬಿತ್ತನೆ ಮಾಡುವದರಿಂದ ಬೀಜದ ಮೊಳಕೆ ಪ್ರಮಾಣ, ಸಸಿಗಳ ಬೆಳವಣಿಗೆ ಚೆನ್ನಾಗಿ ಬರುವದು ಹಾಗೂ ಬೆಳೆಗೆ ಬರ ನಿರೋಧಕ ಶಕ್ತಿ ಬರುತ್ತದೆ.

3) **ಅಗಲವಾದ ಅಂತರದ ಸಾಲಿನ ಬಿತ್ತನೆ** : ಒಣಬೇಸಾಯದಲ್ಲಿ ಕಪ್ಪು ಮಣ್ಣಿನಲ್ಲಿ ಸೂರ್ಯಕಾಂತಿ ಬೆಳೆ ಬಿತ್ತುವಾಗ ಅಗಲವಾದ ಅಂತರದ ಸಾಲುಗಳಲ್ಲಿ (3 ರಿಂದ 4 ಅಡಿ ಇರುವಂತೆ) ಬಿತ್ತನೆ ಮಾಡಬೇಕು. ಇದರಿಂದ ಸಾಲುಗಳ ಮಧ್ಯದಲ್ಲಿ ಮೇಲಿಂದ ಮೇಲೆ ಎಡೆ ಹೊಡೆಯುವದು ಅಥವಾ ಅಂತರ ಬೇಸಾಯ ಮಾಡುವುದರಿಂದ ಮಣ್ಣಿನ ಹೊದಿಕೆ ನಿರ್ಮಾಣವಾಗಿ ಮಣ್ಣಿನಲ್ಲಿ ಬಿಡುವ ಎರಕಲು ಬೀಡು/ಬಿರುಕುಗಳನ್ನು ಮುಚ್ಚುತ್ತದೆ. ಇದರಿಂದ ಮಣ್ಣಿನಲ್ಲಿರುವ ತೇವಾಂಶವನ್ನು ಹೆಚ್ಚು ದಿನಗಳವರೆಗೆ ಹಿಡಿದಿಟ್ಟುಕೊಳ್ಳಲು ಸಹಾಯವಾಗುತ್ತದೆ. ಈ ರೀತಿ ಬಿತ್ತುವುದರಿಂದ ಶೇಕಡಾ 20-25 ರಷ್ಟು ಇಳುವರಿ ಹೆಚ್ಚುತ್ತದೆ.

4) **ತೇವಾಂಶ ಸಂರಕ್ಷಣಾ ಹರಿಗಳು:** ಈಗಾಗಲೇ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯಾಗಿರುವ ಬೆಳೆಗಳಲ್ಲಿ ಮಣ್ಣಿನ ತೇವಾಂಶ ಕಾಯ್ದುಕೊಳ್ಳಲು ಪ್ರತಿ 30-35 ಘೂಟು ಅಂತರದಲ್ಲಿ ತೇವಾಂಶ ಸಂರಕ್ಷಣಾ ಹರಿಗಳನ್ನು ಎಡೆಕುಂಟೆಗೆ ಕಟ್ಟಿಗೆಯ ಹಲಗೆ ಕಟ್ಟಿ ನಿರ್ಮಿಸುವುದು ಸೂಕ್ತ. ಇದರಿಂದಾಗಿ ಬಿದ್ದ ಮಳೆ ನೀರು ಹರಿಗಳಲ್ಲಿ ಸಂರಕ್ಷಣೆಯಾಗಿ ಮಣ್ಣಿನ ತೇವಾಂಶ ಹೆಚ್ಚಿಸಲು ಸಹಾಯಕಾರಿ ಆಗುತ್ತದೆ.

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬೀಮಾ ಬೆಳೆ ವಿಮೆ ಯೋಜನೆ

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬೀಮಾ (ವಿಮೆ) ಯೋಜನೆ ಅಡಿ ರೈತರು ವಿವಿಧ ಬೆಳೆಗಳಿಗೆ ವಿಮೆ ಮೊತ್ತವನ್ನು ಕೊನೆಯ ದಿನಾಂಕ ದೊಳಗಾಗಿ ಭರಿಸಿದರೆ ನಿಮ್ಮ ವಿಮೆ ಯೋಜನೆಗೆ ಒಳ ಪಡುತ್ತಾರೆ. ಬೆಳೆ ವಿಮೆ ಮಾಡಿಸುವ ರೈತರು ಕಡ್ಡಾಯವಾಗಿ FRUITS ID (FID) ಹೊಂದಿರಬೇಕು. ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆದ ಅಥವಾ ಬೆಳೆ ಸಾಲ ಪಡೆಯದ ರೈತರು ಈ ಯೋಜನೆ ಅಡಿ ಭಾಗವಹಿಸಬಹುದು. ಬೆಳೆ ಸಾಲ ಪಡೆಯುವ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವದಕ್ಕೆ ಧಾಖಲೆಗಳಾದ ಪಹಣಿ/ಖಾತೆ ಪುಸ್ತಕ/ಕಂದಾಯ ಮತ್ತು ಆಧಾರ ಸಂಖ್ಯೆಯನ್ನು ನೀಡಿ ನೊಂದಾಯಿಸಕೊಳ್ಳಬಹುದು. ವಿವಿಧ ಬೆಳೆಗಳು ಹಾಗೂ ವಿಮೆ ನೊಂದಾಯಿಸಲು ಕೊನೆಯ ದಿನಾಂಕ ಮಾಹಿತಯನ್ನು ಕೊಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ / ಸಹಾಯಕ ಕೃಷಿ ನಿರ್ದೇಶಕರ ಕಛೇರಿ / ತೋಟಗಾರಿಕೆ ಇಲಾಖೆ / ಕಂದಾಯಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ ಇಲಾಖೆ/ಸಾರ್ವಜನಿಕ ಖನಿತ ಸೇವಾ ಕೇಂದ್ರ (CSC) ಗ್ರಾಮ ಒನ್ ಕೇಂದ್ರ ಇವರನ್ನು ಸಂಪರ್ಕಿಸಬಹುದು.

ರೈತರಿಗೆ ವಿಶೇಷ ಸಲಹೆಗಳು

1) ಹೆಸರು ಬೆಳೆಯಲ್ಲಿ ಹಳದಿ ನಂಜು ರೋಗ ಕಾಣಿಸಿಕೊಂಡ ತಕ್ಷಣ ಗಿಡಗಳನ್ನು ಕಿತ್ತು ಮಣ್ಣಿನಲ್ಲಿ ಹೂತು 0.3 ಮಿ.ಲೀ ಇಮಿಡಾಕ್ಲೋಪ್ರಿಡ್ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
2) ಹೆಸರು ಬೆಳೆ ಹೂವು ಬಿಡುವ ಅಥವಾ ಮಿಡಿಕಾಯಿ ಕಾಣಿಸುವ ಸಮಯದಲ್ಲಿ ಕಾಯಿಕೊರಕ ಮತ್ತು ಬೂದಿರೋಗದ ಬಾಧೆ ಕಾಣಿಸಿದ ತಕ್ಷಣ 2 ಮಿ.ಲೀ ಕಾರ್ಬೋಸಲ್ಫಾನ್, 1 ಮಿ.ಲೀ ಪ್ರೊಪಿಕೊನಾಜೋಲ್ ಹಾಗೂ 4 ಗ್ರಾಂ 19:19:19 ನೀರಿನಲ್ಲಿ ಕರಗುವ ಗೊಬ್ಬರವನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
3) ತೊಗರಿ ಬೆಳೆಯಲ್ಲಿ ಎಲೆ ಮಡಚುವ ಹುಳು ಕಂಡ ತಕ್ಷಣ 2 ಮಿ.ಲೀ ಪ್ರೊಫೆನೋಫಾಸ್, 1 ಮಿ.ಲೀ ಡಿ.ಡಿ.ವ್ಹಿ.ಪಿ ಔಷಧಿ ಮತ್ತು 19:19:19 ಗೊಬ್ಬರವನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
4) ಮೆಣಸಿನಕಾಯಿ ಬೆಳೆಯಲ್ಲಿ ಹೊರಮುಟರಿ ಮತ್ತು ಒಳಮುಟರಿ ರೋಗ ಕಂಡ ತಕ್ಷಣ 1.5 ಗ್ರಾಂ ಡೈಫೆಂತೂರಿಯಾನ, 0.3 ಮಿ.ಲೀ ಇಮಿಡಾಕ್ಲೋಪ್ರಿಡ್ ಮತ್ತು 4 ಗ್ರಾಂ ನೀರಿನಲ್ಲಿ ಕರಗುವ 19:19:19 ಗೊಬ್ಬರವನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
5) ಕಡಲೆ ಬೆಳೆ ಬಿತ್ತುವ ಪೂರ್ವದಲ್ಲಿ ಸಸಿ ಸೊರಗುವ ರೋಗ ಹತೋಟಿ ಮಾಡಲು 1 ಕಿಲೋ ಬೀಜಕ್ಕೆ 10 ಗ್ರಾಂ ಟ್ರೈಕೊಡರ್ಮಾ ಅಥವಾ 3 ಗ್ರಾಂ ಕಾರ್ಬಾಕ್ಸಿನ್ ಔಷಧಿಯನ್ನು ಬೀಜೋಪಚಾರ ಮಾಡಿ ಬಿತ್ತಬೇಕು.
6) ಎರೆಹುಳು ಗೊಬ್ಬರ ಮತ್ತು ಘನ ಜೀವಾಮೃತ ತಯಾರಿಸಿ ಜಮೀನಿಗೆ ಹಾಕುವದರಿಂದ ಕಡಿಮೆ ತೇವಾಂಶದಲ್ಲಿ ಕೂಡಾ ಉತ್ತಮ ಇಳುವರಿ ಪಡೆಯಬಹುದು.
7) 1-2 ಇಂಚು ಉದ್ದ ತುಂಡರಿಸಿದ 100 ಕಿಲೋ ಒಣಮೇವಿಗೆ 25 ಲೀಟರ್ ನೀರಿನಲ್ಲಿ ಒಂದು ಕಿಲೋ ಉಪ್ಪು ಹಾಗೂ ಒಂದು ಕಿಲೋ ಬೆಲ್ಲವನ್ನು ಕರಗಿಸಿದ ದ್ರಾವಣವನ್ನು ಸಿಂಪಡಿಸಿರಿ. ನಂತರ ನೆರಳಿನಲ್ಲಿ ಮೇವನ್ನು ಒಣಗಿಸಿ ದನಗಳಿಗೆ ತಿನ್ನಿಸಬೇಕು.
8) ಉಳ್ಳಾಗಡ್ಡಿ ಬೆಳೆಯಲ್ಲಿ ಟ್ರೈಕೋಡರ್ಮಾ ವಿರಿಡೆ ಪುಡಿಯನ್ನು 1 ಕಿಲೋ ಬೀಜಕ್ಕೆ 5 ಗ್ರಾಂ ನಂತೆ ಹಾಕಿ ಬೀಜೋಪಚಾರ ಮಾಡಬೇಕು.

ಮೊಬೈಲ್ ಮೂಲಕ ಕೃಷಿ ಸಂದೇಶಗಳನ್ನು ಪಡೆಯಲು ನೋಂದಣಿಗಾಗಿ ದೂರವಾಣಿ ಸಂಖ್ಯೆ: 08372-289325 ಕರೆ ಮಾಡಿರಿ

ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು: ಡಾ॥ ಸುಧಾ ಮಂಕಣಿ, ವಿಷಯ ತಜ್ಞರು (ಗೃಹ ವಿಜ್ಞಾನ)

ಸಂಪಾದಕರು : ಡಾ॥ ಕಲ್ಲನಗೌಡ ವಿ. ಪಾಟೀಲ, ವಿಷಯ ತಜ್ಞರು (ಕೃಷಿ ವಿಸ್ತರಣೆ)

ಸಹ ಸಂಪಾದಕರು: ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ)
ಶ್ರೀಮತಿ ಹೇಮಾವತಿ ಆರ್. ಹಿರೇಗೌಡರ್, ವಿಷಯ ತಜ್ಞರು (ತೋಟಗಾರಿಕೆ)
ಡಾ॥ ವಿನಾಯಕ ಎಚ್. ನಿರಂಜನ, ವಿಷಯ ತಜ್ಞರು (ಕೃಷಿ ಇಂಜನಿಯರಿಂಗ್)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ
ಡಾ॥ ಪ್ರವೀಣ ಕರಿಕಟ್ಟಿ, ಕಾರ್ಯಕ್ರಮ ಸಹಾಯಕರು (ಲ್ಯಾಬ್ಸ್)

ವಿನ್ಯಾಸ ಹಾಗೂ ಅಕ್ಷರಜೋಡಣೆ:
ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕಯಂತ್ರ)
ಶ್ರೀ ಟಿ.ಕೆ.ಸಾಯಿ ಸ್ವರೂಪರಾವ್, ಸ್ಟೆನೋಗ್ರಾಫರ್

ಸಹಾಯ : ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು

ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಸುಧಾ ಮಂಕಣಿ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು,
ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನಕೇಂದ್ರ, ಹುಲಕೋಟಿ-582205, ಗದಗಜಿಲ್ಲೆ, ಕರ್ನಾಟಕರಾಜ್ಯ
ಫೋನ್: (08372)289325, ಇ-ಅಂಚೆ:kvk.Gadag@icar.gov.in, kvkhulkoti@gmail.com,ಅಂತರ್‌ಜಾಲ: kvkgadag.icar.gov.in